# ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977

(ಕರ್ನಾಟಕ ರಾಜ್ಯಪತ್ರ, ಗುರುವಾರ, ಅಕ್ಟೋಬರ್ 23, 2008, ಭಾಗ – IVಎ, 837 ರಿಂದ 860ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಹೆಸರು, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ನೌಕರಿ ಭರ್ತಿ ವಿಧಾನ

3ಎ. ಮಾಜಿ ಸೈನಿಕರ ಸಂಬಂಧದಲ್ಲಿ ಅರ್ಹತೆ

3ಬಿ. [xxx]

4. ನೇಮಕದ ಪ್ರಕ್ರಿಯೆ

4ಎ. ಬಡ್ತಿಯನ್ನು ಬಿಟ್ಟುಕೊಡುವುದು

5. ನೇಮಕಕ್ಕೆ ಸಂಬಂಧಿಸಿದ ಅರ್ಹತೆ
6. ನೇಮಕಕ್ಕೆ ವಯೋಮಿತಿ
7. ಕಡ್ಡಾಯ ನಿವೃತ್ತಿಯ ದಿನಾಂಕದ ನಂತರ ಬಡ್ತಿ
8. ನೇಮಕಾತಿಗಳು ಅಥವಾ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಉಪಬಂಧ
9. ಮಾಜಿ ಸೈನಿಕರಿಗೆ, ದೈಹಿಕ ಅಂಗವಿಕಲರು ಮತ್ತು ಯೋಜನೆಯಿಂದ ನಿರಾಶ್ರಿತರಾದ ಕುಟುಂಬದ ಸದಸ್ಯರಿಗೆ, ಮಹಿಳೆಯರಿಗೆ ಮತ್ತು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅವಕಾಶ
10. ಸೂಕ್ತತೆಯ ಮತ್ತು ನಡತೆಯ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಷರತ್ತುಗಳು
11. ಸರ್ಕಾರಿ ನೌಕರರು ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ
12. ದೇಹದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು
13. ಶುಲ್ಕಗಳು
14. ಕೆಲವು ತಾತ್ಕಾಲಿಕ ಹುದ್ದೆಗಳಿಗೆ ನೌಕರಿಭರ್ತಿ ವಿಧಾನ ಮತ್ತು ಅರ್ಹತೆ
15. ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮತ್ತು ಕರಾರು ಮೂಲಕ ನೇಮಕ ಮಾಡಿಕೊಳ್ಳುವುದಕ್ಕೆ ಉಪಬಂಧ
16. ನೇಮಕಕ್ಕೆ ಮತ್ತು ಅರ್ಹತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಸಡಿಲಿಸುವುದು

16ಎ. ಸೇವೆಯೊಳಗೆ ವರ್ಗಾವಣೆ ಮೂಲಕ ನೇಮಕ ಮಾಡುವುದು

17. ಕೆಲವು ಪ್ರಕರಣಗಳಲ್ಲಿ ನೇರ ನೌಕರಿ ಭರ್ತಿ ಮೂಲಕ ಅಥವಾ ಬಡ್ತಿ ಮೂಲಕ ನೇಮಕ
18. ನೇಮಕಗೊಂಡ ಹುದ್ದೆಗೆ ಸೇರುವ ಕಾಲ
19. ಪ್ರೊಬೇಷನ್ ಮತ್ತು ಬಡ್ತಿ ಮೂಲಕ ನೇಮಕಗಳು
20. ದುರ್ವರ್ತನೆ
21. ನಿರಸನ

# ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977

## (ಡಿಸೆಂಬರ್ 2005ರವರೆಗೆ ತಿದ್ದುಪಡಿಯಾದಂತೆ)

### ಅಧಿಸೂಚನೆ

### ಸಂಖ್ಯೆ ಡಿಪಿಎಆರ್ 57 ಎಸ್‌ಆರ್‌ಆರ್ 75, ದಿನಾಂಕ 25ನೇ ಜೂನ್ 1977

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

**1. ಹೆಸರು, ಪ್ರಾರಂಭ ಮತ್ತು ಅನ್ವಯ.**– (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) (ಎ) ಈ ನಿಯಮಗಳು, ಎಲ್ಲಾ ರಾಜ್ಯ ಸೇವೆಗಳಿಗೆ ಮತ್ತು ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲಾ ಹುದ್ದೆಗಳಿಗೆ ಮಾಡುವ ನೌಕರಿ ಭರ್ತಿಗೆ ಮತ್ತು ಎಲ್ಲಾ ರಾಜ್ಯ ಸಿವಿಲ್ ಸೇವೆಗಳ ಸದಸ್ಯರಿಗೆ, ಮತ್ತು,–

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ; ಅಥವಾ

(ii) ಅಂಥ ಸೇವೆಯ ಯಾರೇ ಸದಸ್ಯನಿಗೆ ಸಂಬಂಧಿಸಿದಂತೆ ಅಂಥ ಸದಸ್ಯನ ಮತ್ತು ರಾಜ್ಯ ಸರ್ಕಾರದ ನಡುವೆ ಆಗಿರುವ ಕರಾರು ಅಥವಾ ಒಪ್ಪಂದದ ಮೂಲಕ

– ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವಷ್ಟರ ಮಟ್ಟಿಗೆ ಹೊರತು ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯಾಗಲಿ ಹುದ್ದೆಗಳನ್ನು ಹೊಂದಿರುವವರಿಗೆ ಅನ್ವಯಸತಕ್ಕದ್ದು:

[1][ಪರಂತು ಈ ನಿಯಮಗಳ 3(2), 3ಎ, [2][9(1ಎ) 15(1), 16, 16ಎ ಮತ್ತು 17ನೇ ನಿಯಮದ ಉಪಬಂಧಗಳು, ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಅಸಂಗತವಾದುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು][2]][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 1 ಎಸ್‌ಆರ್‌ಆರ್ 90 ದಿನಾಂಕ 6–3–91 ರಾಜ್ಯಪತ್ರ ದಿನಾಂಕ 14–3–1991ರ ಮೂಲಕ ಪರಂತುಕವನ್ನು ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಆರ್‌ಆರ್ 92 ದಿನಾಂಕ 14–6–1994ರ ಮೂಲಕ ಸೇರಿಸಲಾಗಿದೆ.

(ಬಿ) ಈ ನಿಯಮಗಳು,–

(i) ಅಖಿಲ ಭಾರತ ಸೇವೆಗಳ ಸದಸ್ಯರ ನೇಮಕದ ಮೂಲಕ ಭರ್ತಿಮಾಡಿಕೊಳ್ಳುವ;

(ii) ಸರ್ಕಾರದ ಯಾವುದೇ ಕೈಗಾರಿಕಾ ಉದ್ಯಮಗಳಲ್ಲಿನ;

(iii) ಸಾಂದರ್ಭಿಕ ಉದ್ಯೋಗಕ್ಕೆ ಭರ್ತಿಮಾಡಿಕೊಳ್ಳುವ; ಮತ್ತು

(iv) ಕೆಲಸಕ್ಕೆ ತಕ್ಕ ಹಣ ಪಡೆಯುವ (ವರ್ಕ್‌ಚಾರ್ಜ್ಡ್) ಸಿಬ್ಬಂದಿ ವರ್ಗದ ಹುದ್ದೆಗಳಿಗೆ ಮಾಡಿಕೊಳ್ಳುವ ನೌಕರಿ ಭರ್ತಿಗೆ ಅನ್ವಯಿಸತಕ್ಕದ್ದಲ್ಲ.

**2. ಪರಿಭಾಷೆಗಳು.**– (1) ಈ ನಿಯಮಗಳಲ್ಲಿ ಮತ್ತು ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರೊಬೇಷನ್ ಮೇಲೆ ನೇಮಕಗೊಂಡ" ಅಥವಾ "ಸ್ಥಾನಪನ್ನ ಆಧಾರದ ಮೇಲೆ ನೇಮಕಗೊಂಡ" ಎಂದರೆ ಪರೀಕ್ಷಾರ್ಥವಾಗಿ ನೇಮಕಗೊಂಡ ಎಂದು ಅರ್ಥ.

(ಬಿ) "ಕೇಂದ್ರ ಸಶಸ್ತ್ರ ಪಡೆಗಳು" ಎಂದರೆ ಕೇಂದ್ರದ ನೌಕಾ, ಸೈನಿಕ, ವಾಯು ಪಡೆಗಳು ಎಂದು ಅರ್ಥ ಮತ್ತು ಅದು ಹಿಂದಿನ ಭಾರತೀಯ ರಾಜ್ಯಗಳ ಸಶಸ್ತ್ರ ಪಡೆಗಳನ್ನು ಒಳಗೊಳ್ಳುತ್ತದೆ. [1][ಆದರೆ ಅಸ್ಸಾಂ ರೈಫಲ್ಸ್, ರಕ್ಷಣಾ ಭದ್ರತಾ ದಳಗಳು, ಸಾಮಾನ್ಯ ಮೀಸಲು ಇಂಜಿನಿಯರಿಂಗ್ ಪಡೆ, ಲೋಕ ಸಹಾಯಕ ಸೇನಾ ಮತ್ತು ಪ್ರಾದೇಶಿಕ ಸೇನೆಯನ್ನು ಒಳಗೊಳ್ಳುವುದಿಲ್ಲ.][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಆರ್‌ಆರ್ 92 ದಿನಾಂಕ 31–3–92 ರಾಜ್ಯಪತ್ರ ದಿನಾಂಕ 1–4–1992ರ ಮೂಲಕ ಪ್ರತಿಯೋಜಿಸಲಾಗಿದೆ.

(ಸಿ) "ಸ್ನಾತಕ ಪದವಿ", "ಸ್ನಾತಕೋತ್ತರ ಪದವಿ", "ಪದವಿ" ಅಥವಾ "ಡಾಕ್ಟೋರೇಟ್" ಎಂದರೆ ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯವು ಪ್ರದಾನ ಮಾಡಿದ ಅಂಥ ಪದವಿ ಅಥವಾ ಡಾಕ್ಟೋರೇಟ್ ಎಂದು ಅರ್ಥ.

(ಡಿ) [1][ಬಿಟ್ಟುಬಿಡಲಾಗಿದೆ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಆರ್‌ಆರ್ 95, ದಿನಾಂಕ 25.7.1995ರ ಮೂಲಕ ಬಿಟ್ಟುಬಿಡಲಾಗಿದೆ.

[1][(ಡಿಡಿ) **"ಜೀತ ಕಾರ್ಮಿಕ"** ಎಂದರೆ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಅಧಿನಿಯಮ, 1976 (1976ರ ಕೇಂದ್ರ ಅಧಿನಿಯಮ 19) ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಅಧ್ಯಾದೇಶ, 1975ರ ಕಾರಣದಿಂದ ಜೀತಕಾರ್ಮಿಕ ಪದ್ಧತಿಯಿಂದ ವಿಮುಕ್ತನಾದ ಮತ್ತು ಜಿಲ್ಲಾ ದಂಡಾಧಿಕಾರಿಯವರಿಂದ ಸದರಿ ಅಧಿನಿಯಮ ಅಥವಾ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ನಿಷೇಧ) ಅಧ್ಯಾದೇಶ, 1975 (1975ರ ಕರ್ನಾಟಕ ಅಧ್ಯಾದೇಶ 13)ರ ಉಪಬಂಧಗಳ ಅಡಿಯಲ್ಲಿ ಜೀತ ಋಣ ಪಾವತಿ ಹೊಣೆಗಾರಿಕೆಯಿಂದ ಜೀತ ವಿಮುಕ್ತ ಕಾರ್ಮಿಕನೆಂಬ ಪ್ರಮಾಣಪತ್ರವನ್ನು ಸಲ್ಲಿಸುವ ವ್ಯಕ್ತಿ ಎಂದು ಅರ್ಥ][1];

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 44 ಎಸ್‌ಆರ್‌ಆರ್ 80, ದಿನಾಂಕ 6.1.1981ರ ಮೂಲಕ ಸೇರಿಸಲಾಗಿದೆ.

(ಇ) "ಆಯೋಗ" ಎಂದರೆ ಕರ್ನಾಟಕ ಲೋಕಸೇವಾ ಆಯೋಗ;

(ಎಫ್) "ಡಿಪ್ಲೋಮ" ಅಥವಾ "ಪ್ರಮಾಣ ಪತ್ರ" ಎಂದರೆ ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯ ಅಥವಾ ಅಂಥ ಡಿಪ್ಲೋಮ ಅಥವಾ ಪ್ರಮಾಣಪತ್ರ ನೀಡುವುದಕ್ಕಾಗಿ ಸರ್ಕಾರದಿಂದ ಅಧಿಕಾರ ಪಡೆದ ಪ್ರಾಧಿಕಾರ ನೀಡಿದ ಡಿಪ್ಲೋಮಾ ಅಥವಾ ಪ್ರಮಾಣ ಪತ್ರ ಎಂದು ಅರ್ಥ;

(ಜಿ) ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ "ನೇರ ನೇಮಕಾತಿ" ಎಂದರೆ ಯಾವುದೇ ರಾಜ್ಯ ಸಿವಿಲ್ ಸೇವೆಯಿಂದ ಮುಂಬಡ್ತಿ ಅಥವಾ ವರ್ಗಾವಣೆ ಮಾಡದೆ ಮಾಡಿಕೊಂಡ ನೇಮಕ ಎಂದು ಅರ್ಥ. ಆದರೆ ಇದರಲ್ಲಿ ನಿಯಮ 15ರ ಅಡಿಯಲ್ಲಿನ ನೇಮಕಾತಿಯು ಒಳ್ಳಗೊಳ್ಳತಕ್ಕದ್ದಲ್ಲ;

(ಹೆಚ್) "ತತ್ಸಮಾನ ವಿದ್ಯಾರ್ಹತೆ" ಎಂದರೆ ಯಾವುದೇ ರಾಜ್ಯ ಸಿವಿಲ್ ಸೇವೆಯ ನೌಕರಿ ಭರ್ತಿಯನ್ನು ನಿಯಂತ್ರಿಸುವ ನಿಯಮಗಳಲ್ಲಿರುವ ಯಾವುದೇ ಹುದ್ದೆಯ ಸಂಬಂಧದಲ್ಲಿ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಗೆ ಸಮಾನವಾಗಿರಬೇಕೆಂದು ಅಧಿಸೂಚಿಸುವ ವಿದ್ಯಾರ್ಹತೆ ಎಂದು ಅರ್ಥ;

[1][(i) "ಮಾಜಿ ಸೈನಿಕ" ಎಂದರೆ ಕೇಂದ್ರದ ನಿಯತ ಸೇನೆಯಲ್ಲಿ, ನೌಕಾಪಡೆಯಲ್ಲಿ ಮತ್ತು ವಾಯುಪಡೆಯಲ್ಲಿ ಯಾವುದೇ ದರ್ಜೆಯಲ್ಲಿ (ಯೋಧನಾಗಿ ಅಥವಾ ಯೋಧನಾಗಿಲ್ಲದೆ) ಸೇವೆ ಸಲ್ಲಿಸಿರುವ ವ್ಯಕ್ತಿ ಎಂದು ಅರ್ಥ. ಇದು ರಕ್ಷಣಾ ಭದ್ರತಾ ದಳ, ಸಾಮಾನ್ಯ ಮೀಸಲು ಇಂಜಿನಿಯರಿಂಗ್ ಪಡೆ, ಲೋಕ ಸಹಾಯಕ ಸೇನಾ ಮತ್ತು ಅರೆ ಮಿಲಿಟರಿ ಪಡೆಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು; ಮತ್ತು

(ಎ) ನಿವೃತ್ತಿ ವೇತನವನ್ನು ಗಳಿಸಿದ ತರುವಾಯ ಅಂಥ ಸೇವೆಯಿಂದ ನಿವೃತ್ತನಾಗುವ ವ್ಯಕ್ತಿಯನ್ನು; ಅಥವಾ

(ಬಿ) ಸೈನಿಕ ಸೇವೆಯಿಂದ ಉಂಟಾದ ವೈದ್ಯಕೀಯ ಕಾರಣಗಳು ಅಥವಾ ಆತನ ನಿಯಂತ್ರಣ ಮೀರಿದ ಪರಿಸ್ಥಿತಿಗಳ ಮೇಲೆ ಅಂಥ ಸೇವೆಯಿಂದ ಬಿಡುಗಡೆ ಮಾಡಿರುವ ಮತ್ತು ವೈದ್ಯಕೀಯ ಅಥವಾ ಇತರ ಅಸಮರ್ಥತಾ ನಿವೃತ್ತಿ ವೇತನವನ್ನು ನೀಡಲಾಗಿರುವ ವ್ಯಕ್ತಿಯನ್ನು; ಅಥವಾ

(ಸಿ) ಆತನ ವೈಯಕ್ತಿಕ ಕೋರಿಕೆಯ ಮೇಲಲ್ಲದೆ ಸಿಬ್ಬಂದಿ ಸಂಖ್ಯೆಯ ಕಡಿತದ ಪ್ರತಿಫಲವಾಗಿ ಅಂಥ ಸೇವೆಯಿಂದ ಆತನನ್ನು ಬಿಡುಗಡೆಗೊಳಿಸಿರುವ ವ್ಯಕ್ತಿಯನ್ನು; ಅಥವಾ

(ಡಿ) ಆತನ ವೈಯಕ್ತಿಕ ಕೋರಿಕೆ ಮೇಲಲ್ಲದೆ ಅಥವಾ ದುರ್ವರ್ತನೆ ಅಥವಾ ಅದಕ್ಷತೆಯ ಕಾರಣದಿಂದ ವಜಾಗೊಳಿಸುವ ಅಥವಾ ತೆಗೆದುಹಾಕುವ ಮೂಲಕವಲ್ಲದೆ ಅನ್ಯಥಾ ನಿಯೋಜಿಸಲಾದ ನಿರ್ದಿಷ್ಟ ಅವಧಿ ಮುಕ್ತಾಯವಾದ ತರುವಾಯ ಅಂಥ ಸೇವೆಯಿಂದ ಬಿಡುಗಡೆಗೊಳಿಸಿರುವ ಮತ್ತು ಉಪದಾನ ನೀಡಿರುವ ವ್ಯಕ್ತಿಯನ್ನು

– ಒಳಗೊಳ್ಳುವುದಿಲ್ಲ ಮತ್ತು ಪ್ರಾದೇಶಿಕ ಸೇನೆಯ ಮುಂದಿನ ಪ್ರವರ್ಗಗಳ ಸಿಬ್ಬಂದಿಯನ್ನು ಎಂದರೆ,–

(i) ನಿರಂತರ ಸಂಚಿತ ಸೇವೆಗೆ ಸಂಬಂಧಿಸಿದ ನಿವೃತ್ತಿ ವೇತನದಾರರನ್ನು;

(ii) ಸೈನಿಕ ಸೇವೆಯ ಕಾರಣದಿಂದ ಅಂಗವಿಕಲರಾದ ವ್ಯಕ್ತಿಗಳನ್ನು; ಮತ್ತು

(iii) ಶೌರ್ಯ ಪ್ರಶಸ್ತಿ ವಿಜೇತರನ್ನು

– ಒಳಗೊಳ್ಳುತ್ತದೆ.

**ವಿವರಣೆ:–** ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ, ಸೇವೆಯಿಂದ ನಿವೃತ್ತರಾದ ತರುವಾಯ " ಮಾಜಿ ಸೈನಿಕ " ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳು ನಿರ್ದಿಷ್ಟಪಡಿಸಲಾದ ನಿಯೋಜನೆಯ ನಿಬಂಧನೆಗಳನ್ನು ಪೂರ್ಣಗೊಳಿಸುವುದಕ್ಕಿಂತ ಒಂದು ವರ್ಷ ಮೊದಲು ಮರು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಮತ್ತು ಅವರು ಮಾಜಿ ಸೈನಿಕರಿಗೆ ದೊರೆಯುವ ಎಲ್ಲ ರಿಯಾಯಿತಿಗಳನ್ನು ಪಡೆದುಕೊಳ್ಳಲು ಅನುಮತಿಸಬಹುದಾಗಿದೆ. ಆದರೆ ಅವರು ಸಮವಸ್ತ್ರ ಧರಿಸುವುದನ್ನು ಬಿಡಲು ಅವರಿಗೆ ಅನುಮತಿ ನೀಡುವವರೆಗೆ ಅವರನ್ನು ರಾಜ್ಯ ಸಿವಿಲ್ ಸೇವೆ ಅಥವಾ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಆರ್‌ಆರ್ 88 ದಿನಾಂಕ 16–3–89 ರಾಜ್ಯಪತ್ರ 27–4–89ರ ಮೂಲಕ ಪ್ರತಿಯೋಜಿಸಲಾಗಿದೆ.

(ಜೆ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ ಎಂದು ಅರ್ಥ;

(ಕೆ) "ಸರ್ಕಾರಿ ನೌಕರ" ಎಂದರೆ ಕರ್ನಾಟಕ ಸರ್ಕಾರದ ಸಿವಿಲ್ ಸೇವೆಯ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಿವಿಲ್ ಹುದ್ದೆಯನ್ನು ಹೊಂದಿರುವ ವ್ಯಕ್ತಿ ಎಂದು ಅರ್ಥ ಮತ್ತು ಯಾವ ವ್ಯಕ್ತಿಯ ಸೇವೆಯನ್ನು ಭಾರತ ಸರ್ಕಾರದ, ಮತ್ತೊಂದು ರಾಜ್ಯದ ಸರ್ಕಾರದ ಸ್ಥಳೀಯ ಪ್ರಾಧಿಕಾರದ ವಶಕ್ಕೆ ತಾತ್ಕಾಲಿಕವಾಗಿ ಒಪ್ಪಿಸಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು, ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(ಎಲ್) "ಸ್ಥಳೀಯ ಅಭ್ಯರ್ಥಿ" ಎಂಬುದು ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

[1][(1–1) "ಇತರ ಹಿಂದುಳಿದ ವರ್ಗಗಳು" ಎಂದರೆ ಸರ್ಕಾರವು ಭಾರತದ ಸಂವಿಧಾನದ ಅನುಚ್ಛೇದ 16(4)ರ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿಇ 251 ಬಿಸಿಎ 94, ದಿನಾಂಕ 31ನೇ ಜನವರಿ 1995 ರೊಂದಿಗೆ ಓದಲಾದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 150 ಬಿಸಿಎ 94, ದಿನಾಂಕ 17ನೇ ಸೆಪ್ಟೆಂಬರ್ 1994ರಲ್ಲಿ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ,–

(i) ಪ್ರವರ್ಗ– I (ಅತ್ಯಂತ ಹಿಂದುಳಿದವರು);
(ii) ಪ್ರವರ್ಗ II (ಎ) (ತುಲನಾತ್ಮಕವಾಗಿ ಹೆಚ್ಚು ಹಿಂದುಳಿದವರು);
(iii) ಪ್ರವರ್ಗ II (ಬಿ) (ಹೆಚ್ಚು ಹಿಂದುಳಿದವರು);
(iv) ಪ್ರವರ್ಗ III (ಎ) (ಹಿಂದುಳಿದವರು);
(v) ಪ್ರವರ್ಗ III (ಬಿ) (ತುಲನಾತ್ಮಕವಾಗಿ ಹಿಂದುಳಿದವರು)

– ಎಂದು ವರ್ಗೀಕರಿಸಿರುವ ವರ್ಗಗಳಿಗೆ ಅಥವಾ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳು ಎಂದು ಅರ್ಥ.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಆರ್‌ಆರ್ 95 ದಿನಾಂಕ 25ನೇ ಜುಲೈ 1995 ರಾಜ್ಯಪತ್ರ ದಿನಾಂಕ 10–8–95ರ ಮೂಲಕ ಸೇರಿಸಲಾಗಿದೆ.

[1][(11) "ದೈಹಿಕ ಅಂಗವಿಕಲ ಅಭ್ಯರ್ಥಿ" ಅಥವಾ "ಅಂಗವಿಕಲ ವ್ಯಕ್ತಿ" ಎಂದರೆ ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿರುವಂತೆ ಶೇಕಡಾ ನಲವತ್ತಕ್ಕಿಂತ ಕಡಿಮೆಯಲ್ಲದಂತೆ ಈ ಮುಂದಿನ ಯಾವುದೇ ಒಂದು ದೋಷದಿಂದ ಬಳಲುತ್ತಿರುವ ವ್ಯಕ್ತಿ, ಎಂದರೆ.–

(i) ಅಂಧತ್ವ
(ii) ಮಂದ ದೃಷ್ಟಿ
(iii) ವಾಸಿಯಾಗಿರುವ ಕುಷ್ಠರೋಗ
(iv) ದುರ್ಬಲ ಶ್ರವಣ ಶಕ್ತಿ
(v) ಚಲನಶಕ್ತಿ ಇಲ್ಲದಿರುವುದು
(vi) ಬುದ್ಧಿ ಮಾಂದ್ಯತೆ
(vii) ಮಾನಸಿಕ ಅಸ್ವಸ್ಥತೆ.

**ವಿವರಣೆ.–** (ಎ) ಅಂಧತ್ವ ಎಂದರೆ ವ್ಯಕ್ತಿಯು ಈ ಮುಂದಿನ ದೋಷಗಳ ಪೈಕಿ ಯಾವುದಾದರೂ ಒಂದರಿಂದ ಬಳಲುತ್ತಿರುವುದು,–

(i) ಸಂಪೂರ್ಣ ದೃಷ್ಟಿಹೀನತೆ; ಅಥವಾ

(ii) ಕನ್ನಡಕ ಹಾಕಿಕೊಂಡಾಗ ಕಣ್ಣಿನ ದೃಷ್ಟಿ ಸರಿಹೋಗಿ, ಕಣ್ಣಿನ ದೃಷ್ಟಿ ಶಕ್ತಿಯು 6/60 ಅಥವಾ 20/200 (ಸ್ನೆಲ್ಲೆನ್) ಕ್ಕಿಂತ ಮೀರದಷ್ಟು ಇರುವುದು; ಅಥವಾ

(iii) ಕಣ್ಣಿನ ದೃಷ್ಟಿ ಎಲ್ಲಿಯವರೆಗೆ ಕಾಣುವುದೋ ಆ ದೂರದ ಮಿತಿ 20 ಡಿಗ್ರಿ ಕೋನದಷ್ಟು ಕಾಣುತ್ತಿರುವುದು ಅಥವಾ ಅದಕ್ಕಿಂತ ತೀರಾ ಕಡಿಮೆ ಇರುವುದು;

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ 3-9-05 ರಾಜ್ಯಪತ್ರ ದಿನಾಂಕ 3-9-2005ರ ಮೂಲಕ ಪ್ರತಿಯೋಜಿಸಲಾಗಿದೆ.

(ಬಿ) 'ಮಂದದೃಷ್ಟಿಯ ವ್ಯಕ್ತಿ' ಎಂದರೆ ಚಿಕಿತ್ಸೆಯಾದ ಮೇಲೂ ಅಥವಾ ಉತ್ಕೃಷ್ಟ ವಿಧಾನದಿಂದ ಅಸಮಕೋನವನ್ನು ಸರಿಪಡಿಸಿಯಾದ ಮೇಲೂ ದುರ್ಬಲ ದೃಷ್ಟಿ ದೋಷ ಇರುವಂಥ ಆದರೆ, ಒಂದು ಕೆಲಸವನ್ನು ಯೋಜಿಸುವುದಕ್ಕೆ ಅಥವಾ ಮಾಡುವುದಕ್ಕೆ ಕಣ್ಣಿನ ಶಕ್ತಿಯನ್ನು ಬಳಕೆ ಮಾಡುತ್ತಿರುವ ಅಥವಾ ಬಳಕೆ ಮಾಡುವುದಕ್ಕೆ ಸಾಮರ್ಥ್ಯ ಇರುವ ವ್ಯಕ್ತಿ ಎಂದು ಅರ್ಥ;

(ಸಿ) ವಾಸಿಯಾಗಿರುವ ಕುಷ್ಠರೋಗ ಎಂದರೆ ಕುಷ್ಠರೋಗ ವಾಸಿಯಾಗಿದ್ದರೂ;

(i) ಕೈಗಳಲ್ಲಿ ಅಥವಾ ಪಾದಗಳಲ್ಲಿ ಸಂವೇದನಾ ಶಕ್ತಿ ಇಲ್ಲದಿರುವುದರಿಂದ ಕಣ್ಣಿನಲ್ಲಿ ಮತ್ತು ಕಣ್ಣು ರೆಪ್ಪೆಯಲ್ಲಿ ಸಂವೇದನಾ ಶಕ್ತಿ ಇಲ್ಲದಿರುವುದರಿಂದ ಮತ್ತು ಅರೆ ಪಾರ್ಶ್ವವಾಯುವಿನಿಂದ, ಆದರೆ ಎದ್ದುಕಾಣುವಂಥ ವಿಕಾರ ಇಲ್ಲದಿರುವ;

(ii) ಎದ್ದುಕಾಣುವಂಥ ವಿಕಾರದಿಂದ ಮತ್ತು ಅರೆ ಪಾರ್ಶ್ವವಾಯುವಿನಿಂದ ಬಳಲುತ್ತಿರುವ, ಆದರೆ ತಮ್ಮ ದೈನಂದಿನ ದುಡಿಮೆ ಚಟುವಟಿಕೆಗಳಲ್ಲಿ ನಿರತವಾಗಲು ಸಾಧ್ಯವಾಗುವಷ್ಟು ತಮ್ಮ ಕೈಗಳಲ್ಲಿ ಮತ್ತು ಪಾದಗಳಲ್ಲಿ ಸಮರ್ಪಕವಾದ ಚಲನಶಕ್ತಿ ಇರುವ;

(iii) ಯಾವುದೇ ಆದಾಯದ ವೃತ್ತಿ ಕೈಗೊಳ್ಳಲು ಸಾಧ್ಯವಾಗದಂತೆ ಮಾಡುವ ತೀವ್ರ ದೈಹಿಕ ವಿರೂಪದಿಂದ ಮತ್ತು ತೀರಾ ವೃದ್ಧಾಪ್ಯದಿಂದ

– ಬಳಲುತ್ತಿರುವ ವ್ಯಕ್ತಿ ಎಂದು ಅರ್ಥ ಮತ್ತು "ವಾಸಿಯಾಗಿರುವ ಕುಷ್ಠರೋಗ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಡಿ) "ದುರ್ಬಲ ಶ್ರವಣ ಶಕ್ತಿ" ಎಂದರೆ ಪರಸ್ಪರ ಮಾತನಾಡುವಾಗ ಸರಿಯಾದ ಕಿವಿಯಲ್ಲಿ ಶಬ್ದ ತರಂಗಗಳ ಗ್ರಹಿಕೆಯು ಅರವತ್ತು ಡೆಸಿಬಲ್‌ಗಳು ಅಥವಾ ಅದಕ್ಕೂ ಹೆಚ್ಚು ಪ್ರಮಾಣ ಇಲ್ಲದಿರುವುದು ಎಂದು ಅರ್ಥ.

(ಇ) "ಚಲನಶಕ್ತಿ ಇಲ್ಲದಿರುವುದು" ಎಂದರೆ, ಮೂಳೆಗಳಲ್ಲಿನ, ಕೀಲುಗಳಲ್ಲಿನ ಅಥವಾ ಮಾಂಸಖಂಡಗಳಲ್ಲಿನ ದೋಷದಿಂದಾಗಿ ಅವಯವಗಳ ಚಲನೆಗೆ ಸಾಕಷ್ಟು ತೊಂದರೆಯಾಗಿರುವುದು ಅಥವಾ ಯಾವುದೇ ವಿಧವಾದ ಮಿದುಳು ಪಾರ್ಶ್ವವಾಯು ಎಂದು ಅರ್ಥ.

(ಎಫ್) "ಬುದ್ಧಿಮಾಂದ್ಯತೆ" ಎಂದರೆ ಸಾಧಾರಣಕ್ಕಿಂತ ಕಡಿಮೆ ಬುದ್ಧಿಶಕ್ತಿಯ ವ್ಯಕ್ತಿಯೆಂದು ವಿಶೇಷವಾಗಿ ಗುರುತಿಸಿರುವ ಬುದ್ಧಿಶಕ್ತಿಯ ಬೆಳವಣಿಗೆ ಸ್ಥಗಿತವಾಗಿರುವ ಅಥವಾ ಅಪರಿಪೂರ್ಣ ಬೆಳವಣಿಗೆಯ ಪರಿಸ್ಥಿತಿ ಎಂದು ಅರ್ಥ.

(ಜಿ) "ಮಾನಸಿಕ ಅಸ್ವಸ್ಥತೆ" ಎಂದರೆ ಬುದ್ಧಿಮಾಂದ್ಯತೆಯನ್ನು ಹೊರತುಪಡಿಸಿ ಯಾವುದೇ ಮಾನಸಿಕ ಅಸ್ತವ್ಯಸ್ತತೆ ಎಂದು ಅರ್ಥ.

(ಹೆಚ್) "ಮುಂಬಡ್ತಿ" ಎಂದರೆ ಒಂದು ಹುದ್ದೆಯಿಂದ ಅಥವಾ ಸೇವೆಯ ಒಂದು ದರ್ಜೆಯಿಂದ ಅಥವಾ ಸೇವೆಯ ಒಂದು ವರ್ಗದಿಂದ ಮೇಲಿನ ಹುದ್ದೆಗೆ ಅಥವಾ ಸೇವೆಯ ಮೇಲಿನ ದರ್ಜೆಗೆ ಅಥವಾ ಸೇವೆಯ ಮೇಲಿನ ವರ್ಗಕ್ಕೆ ಸರ್ಕಾರಿ ನೌಕರನ ನೇಮಕ ಎಂದು ಅರ್ಥ;

[1][(ಎಮ್‌ಎಮ್) ಬಿಟ್ಟುಬಿಡಲಾಗಿದೆ][1].

[2][ಎಮ್‌ಎಮ್‌ಎಮ್) ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಎಂಬುವು, ಭಾರತ ಸಂವಿಧಾನದಲ್ಲಿ ಅವುಗಳಿಗೆ ಇರುವ ಅರ್ಥವನ್ನೇ ಹೊಂದಿರತಕ್ಕದ್ದು.][2]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 111 ಎಸ್‌ಆರ್‌ಆರ್ 2002 ದಿನಾಂಕ 3-2-2004 ರಾಜ್ಯಪತ್ರ ದಿನಾಂಕ 21-2-2004ರ ಮೂಲಕ ಬಿಟ್ಟುಬಿಡಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 33 ಎಸ್‌ಆರ್‌ಆರ್ 78 ದಿನಾಂಕ 3-3-1978 ರಾಜ್ಯಪತ್ರ ದಿನಾಂಕ 5-4-1979ರ ಮೂಲಕ ಸೇರಿಸಲಾಗಿದೆ.

(ಎನ್) "ಆಯ್ಕೆ" ಎಂದರೆ ಈ ನಿಯಮಗಳ ಉಪಬಂಧಗಳಿಗನುಸಾರವಾಗಿ,–

(i) ಆಯೋಗದೊಂದಿಗೆ ಸಮಾಲೋಚನೆಯು ಅಗತ್ಯವಿರುವಾಗ ಹಾಗೆ ಸಮಾಲೋಚಿಸಿದ ತರುವಾಯ; ಅಥವಾ

(ii) ಸರ್ಕಾರವು ಈ ಉದ್ದೇಶದ ಸಲುವಾಗಿ ಯಾವುದೇ ಸಲಹಾ ಅಥವಾ ಆಯ್ಕೆ ಸಮಿತಿಯನ್ನು ನೇಮಕ ಮಾಡಿದ್ದರೆ ಆ ಸಲಹಾ ಅಥವಾ ಆಯ್ಕೆ ಸಮಿತಿಯು; ಅಥವಾ

(iii) ಯಾವುದೇ ಸಲಹಾ ಅಥವಾ ಆಯ್ಕೆ ಸಮಿತಿಯನ್ನು ನೇಮಿಸಿಲ್ಲದಿದ್ದರೆ ನೇಮಕ ಪ್ರಾಧಿಕಾರವು

– ಮಾಡಿದ ಆಯ್ಕೆ ಎಂದು ಅರ್ಥ.

(2) 1897ರ ಸಾಮಾನ್ಯ ಖಂಡಗಳ ಅಧಿನಿಯಮವನ್ನು (1897ರ ಕೇಂದ್ರ ಅಧಿನಿಯಮ X) ಕೇಂದ್ರ ಅಧಿನಿಯಮವನ್ನು ಅರ್ಥೈಸುವುದಕ್ಕೆ ಅನ್ವಯಿಸುವಂತೆಯೇ ಈ ನಿಯಮಗಳನ್ನು ಅರ್ಥೈಸುವುದಕ್ಕೂ ಅನ್ವಯಿಸತಕ್ಕದ್ದು.

**3. ನೌಕರಿ ಭರ್ತಿ ವಿಧಾನ.–** [1][(1)] ಈ ನಿಯಮಗಳಲ್ಲಿ ಅಥವಾ ಈ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ಯಾವುದೇ ಇತರ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೌಕರಿ ಭರ್ತಿಯನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕವಾಗಲಿ ಅಥವಾ ಆಯ್ಕೆ ಮೂಲಕವಾಗಲಿ ನೇರವಾಗಿ ಭರ್ತಿಮಾಡಿಕೊಳ್ಳುವ ಮೂಲಕ ಅಥವಾ ಆಯ್ಕೆ ಮೂಲಕ ಅಥವಾ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ನೀಡುವ ಮೂಲಕವಾಗಲಿ ಮಾಡತಕ್ಕದ್ದು. ನೌಕರಿ ಭರ್ತಿ ವಿಧಾನಗಳು ಮತ್ತು ಅರ್ಹತೆಗಳು ಈ ಸಂಬಂಧದಲ್ಲಿ ನಿರ್ದಿಷ್ಟವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 78 ಎಸ್‌ಆರ್‌ಆರ್ 76, ದಿನಾಂಕ 19.06.1982 ರಾಜ್ಯಪತ್ರ ದಿನಾಂಕ 24.06.1982ರ ಮೂಲಕ ಮರು ಸಂಖ್ಯೆ ನೀಡಲಾಗಿದೆ.

ಪರಂತು, ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ನೌಕರಿ ಭರ್ತಿ ವಿಧಾನವನ್ನು ನಿರ್ದಿಷ್ಟಪಡಿಸಿಲ್ಲದಿರುವಾಗ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ನೇರ ನೌಕರ ಭರ್ತಿ ಮಾಡಬೇಕಾದಾಗ, ಸಂದರ್ಭಾನುಸಾರ ಆಯೋಗವು, ಸಲಹಾ ಅಥವಾ ಆಯ್ಕೆ ಸಮಿತಿಯು ಸಂದರ್ಶನ ನಡೆಸಿ ಆಯ್ಕೆ ಮಾಡಿಕೊಳ್ಳುವ ನೌಕರಿ ಭರ್ತಿ ವಿಧಾನದ ಮೂಲಕ ಮಾಡತಕ್ಕದ್ದು:

[1][ಮತ್ತೂ ಪರಂತು, ಯಾರೇ ವ್ಯಕ್ತಿಯು ಆತನು ಹೊಂದಿರುವ ಹುದ್ದೆಯಲ್ಲಿ ಪ್ರೊಬೇಷನ್ ಅಥವಾ ಸಂದರ್ಭಾನುಸಾರ ಸ್ಥಾನಾಪನ್ನ ಅವಧಿಯನ್ನು ತೃಪ್ತಿಕರವಾಗಿ ಮುಗಿಸಿದ ಹೊರತು, ಬಡ್ತಿಗೆ ಅರ್ಹನಾಗಿರತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 20 ಎಸ್‌ಎಸ್‌ಆರ್ 78, ದಿನಾಂಕ 19.7.1978 ರ ಮೂಲಕ ಸೇರಿಸಲಾಗಿದೆ.

[1][(2) ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಇಲಾಖಾ ಮುಖ್ಯಸ್ಥರ ಅಥವಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ತತ್ಸಮಾನವಾದ ದರ್ಜೆಯನ್ನು ಹೊಂದಿರುವಂಥ ಅಪರ ಇಲಾಖಾ ಮುಖ್ಯಸ್ಥರ ಹುದ್ದೆಯಾಗಿದ್ದರೆ ಆ ಹುದ್ದೆಗೆ ಬಡ್ತಿಯನ್ನು ಆಯ್ಕೆ ಮೂಲಕ ಮಾಡತಕ್ಕದ್ದು];[1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 78 ಎಸ್‌ಆರ್‌ಆರ್ 76, ದಿನಾಂಕ: 19.6.1982 ರ ಮೂಲಕ ಸೇರಿಸಲಾಗಿದೆ.

[1][ಪರಂತು, ಆಯ್ಕೆಯ ಮೂಲಕ ಬಡ್ತಿ ನೀಡುವ ಉದ್ದೇಶಕ್ಕಾಗಿ ಪರಿಗಣಿಸಬೇಕಾದ ವ್ಯಕ್ತಿಗಳ ಸಂಖ್ಯೆಯು ಜೇಷ್ಠತಾ ಕ್ರಮದಲ್ಲಿ ಬಡ್ತಿಗೆ ಅರ್ಹರಾಗಿರುವ ವ್ಯಕ್ತಿಗಳ [2][ಸಂಖ್ಯೆ 2(X)+4ಕ್ಕೆ ಸಮಾನವಾಗಿರತಕ್ಕದ್ದು ಮತ್ತು ಇಲ್ಲಿ (X) ಎಂಬುದು ಭರ್ತಿಮಾಡಬೇಕಾದ ಖಾಲಿಸ್ಥಾನಗಳ ಸಂಖ್ಯೆಯಾಗಿರುವುದು][2]][1:]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 33 ಎಸ್‌ಆರ್‌ಆರ್ 83, ದಿನಾಂಕ 10.04.1984ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 23 ಎಸ್‌ಆರ್‌ಆರ್ 93, ದಿನಾಂಕ 16.10.93ರ ಮೂಲಕ ಪ್ರತಿಯೋಜಿಸಲಾಗಿದೆ.

[1][ಮತ್ತೂ ಪರಂತು, ಆಯ್ಕೆಯ ಮೂಲಕ ಬಡ್ತಿ ನೀಡುವುದಕ್ಕೆ ಸಂಬಂಧಿಸಿದ ಪರಿಶೀಲನೆಯ ವ್ಯಾಪ್ತಿಗೊಳಪಡುವ ಅಧಿಕಾರಿಯನ್ನು, ಆತನು ವಯೋನಿವೃತ್ತಿ ಹೊಂದುವುದಕ್ಕೆ ಮೊದಲು ಹುದ್ದೆ ಖಾಲಿಯಾದ ದಿನಾಂಕದಿಂದ ಕನಿಷ್ಠ ಮೂರು ತಿಂಗಳುಗಳ ಸೇವೆ ಹೊಂದಿರುವ ಹೊರತು ಬಡ್ತಿಗೆ ಪರಿಗಣಿಸತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 23 ಎಸ್‌ಆರ್‌ಆರ್ 93, ದಿನಾಂಕ 16.10.93ರ ಮೂಲಕ ಸೇರಿಸಲಾಗಿದೆ.

(ಬಿ) ಇತರ ಎಲ್ಲಾ ಹುದ್ದೆಗಳಿಗೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಬಡ್ತಿ ನೀಡತಕ್ಕದ್ದು.

[1]["(3) ಈ ನಿಯಮಗಳಲ್ಲಿ ಅಥವಾ ಕರ್ನಾಟಕ ಸಿವಿಲ್ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990ರ 14)ರ ಅಡಿಯಲ್ಲಿ ರಚಿಸಿದ ಅಥವಾ ರಚಿಸಲಾಗಿದೆಯೆಂದು ಭಾವಿಸಲಾದ ಇತರ ಯಾವುದೇ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನೇರ ನೌಕರಿ ಭರ್ತಿಯ ಸಂಬಂಧದಲ್ಲಿ, ಸಂದರ್ಭಾನುಸಾರ ಸಂದರ್ಶನ, ಮೌಖಿಕ ಪರೀಕ್ಷೆ ಅಥವಾ ವ್ಯಕ್ತಿತ್ವ ಪರೀಕ್ಷೆಗಾಗಿ ನಿಗದಿಪಡಿಸಿರುವ ಗರಿಷ್ಠ ಅಂಕಗಳು, ಸಂದರ್ಭಾನುಸಾರ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಅರ್ಹತಾ ಪರೀಕ್ಷೆಗಾಗಿ ನಿಗದಿಪಡಿಸಿರುವ ಗರಿಷ್ಠ ಅಂಕಗಳ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ ಮತ್ತು ಸಂದರ್ಭಾನುಸಾರ ಸಂದರ್ಶನ, ಮೌಖಿಕ ಪರೀಕ್ಷೆ ಅಥವಾ ವ್ಯಕ್ತಿತ್ವ ಪರೀಕ್ಷೆಗಾಗಿ ಹಾಗೆ ನಿಗದಿಪಡಿಸಿರುವ ಗರಿಷ್ಠ ಅಂಕಗಳು ಸದರಿ ಶೇಕಡಾ ಪ್ರಮಾಣವನ್ನು ಮೀರಿದರೆ, ಅದನ್ನು ಸಂದರ್ಭಾನುಸಾರ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಅರ್ಹತಾ ಪರೀಕ್ಷೆಗಾಗಿ ನಿಗದಿಪಡಿಸಿರುವ ಗರಿಷ್ಠ ಅಂಕಗಳ ಶೇಕಡಾ ಐದರಷ್ಟಕ್ಕೆ ಇಳಿಸಲಾಗಿದೆಯೆಂದು ಭಾವಿಸತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 34 ಎಸ್‌ಆರ್‌ಆರ್ 2002 ದಿನಾಂಕ 2.3.2002 ರ ಮೂಲಕ ಸೇರಿಸಲಾಗಿದೆ.

[1][3ಎ. **ಮಾಜಿ ಸೈನಿಕರ ಸಂಬಂಧದಲ್ಲಿ ಅರ್ಹತೆ.–** ಈ ನಿಯಮಗಳ ನಿಯಮ 3 ರಲ್ಲಿ ಅಥವಾ ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,–

(1) ಡಿ ಗುಂಪಿನ ಅಡಿಯಲ್ಲಿ ಬರುವ ಕೇಡರ್‌ಗಳು ಅಥವಾ ಹುದ್ದೆಗಳಲ್ಲಿ ಮಾಜಿ ಸೈನಿಕರಿಗಾಗಿ ಮೀಸಲಿರಿಸಿರುವ ಯಾವುದೇ ಖಾಲಿ ಹುದ್ದೆಗೆ ನೇಮಕ ಮಾಡುವುದಕ್ಕಾಗಿ, ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಲ್ಲದಂತೆ ಸೇವೆ ಸಲ್ಲಿಸಿರುವ ಪ್ರತಿಯೊಬ್ಬ ಮಾಜಿ ಸೈನಿಕನಿಗೂ ಅಂಥ ಕೇಡರ್ ಅಥವಾ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ಶೈಕ್ಷಣಿಕ ಅರ್ಹತೆಯನ್ನು ನಿರ್ದಿಷ್ಟಪಡಿಸಿದ್ದರೆ ಅದರಿಂದ ವಿನಾಯತಿ ನೀಡತಕ್ಕದ್ದು, ಮತ್ತು

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 36 ಎಸ್‌ಎಸ್‌ಆರ್ 80, ದಿ:20ನೇ ಅಕ್ಟೋಬರ್ 1982 ರಾಜ್ಯಪತ್ರ ದಿ:10ನೇ ಮೇ 1984ರ ಮೂಲಕ ಸೇರಿಸಲಾಗಿದೆ.

(2) ಡಿ ಗುಂಪಿನ ಅಡಿಯಲ್ಲಿ ಬರುವ ಲಿಪಿಕ ಹುದ್ದೆಗಳನ್ನು ಹೊರತುಪಡಿಸಿ ಕೇಡರ್‌ನಲ್ಲಿ ಅಥವಾ ಹುದ್ದೆಗಳಲ್ಲಿ ಮಾಜಿ ಸೈನಿಕರಿಗೆ ಮೀಸಲಿರಿಸಿರುವ ಯಾವುದೇ ಖಾಲಿ ಹುದ್ದೆಗೆ ನೇಮಕ ಮಾಡುವುದಕ್ಕಾಗಿ,–

(ಎ) 7ನೇ ತರಗತಿ ಅಥವಾ ಯಾವುದೇ ಕೆಳಹಂತದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರ ಬೇಕೆಂಬುದನ್ನು ಕನಿಷ್ಠ ಶೈಕ್ಷಣಿಕ ಅರ್ಹತೆಯನ್ನಾಗಿ ನಿಗದಿಪಡಿಸಿರುವಾಗ ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿರುವ ಮತ್ತು ಅಂಥ ಕೇಡರ್ ಅಥವಾ ಹುದ್ದೆಗಳಿಗೆ ನೇಮಕ ಮಾಡಲು ಅರ್ಹನು ಮತ್ತು ಸೂಕ್ತನು ಆಗಿರುತ್ತಾನೆಂದು ಅನ್ಯಥಾ ಪರಿಗಣಿಸಲಾದ ಮಾಜಿ ಸೈನಿಕರಿಗೆ ಅದರಿಂದ ವಿನಾಯತಿ ನೀಡಬಹುದು.

(ಬಿ) ಭಾಗಶಃ ನೇರ ನೌಕರಿ ಭರ್ತಿ ಮತ್ತು ಭಾಗಶಃ ಬಡ್ತಿ ಅಥವಾ ಭಾಗಶಃ ವರ್ಗಾವಣೆಯ ಮೂಲಕ ಹುದ್ದೆಗಳನ್ನು ತುಂಬಬೇಕಿರುವಾಗ ಮತ್ತು ನೇರ ನೌಕರಿ ಭರ್ತಿಯ ಮೂಲಕ ನೇಮಕ ಮಾಡುವುದಕ್ಕೆ ನಿಗದಿಪಡಿಸಿರುವ ಕನಿಷ್ಠ ಶೈಕ್ಷಣಿಕ ಅಥವಾ ತಾಂತ್ರಿಕ ಅರ್ಹತೆಯು ಬಡ್ತಿ ಅಥವಾ ವರ್ಗಾವಣೆಗೆ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿಗೆ ಇರುವಾಗ,–

(i) ಹುದ್ದೆಗೆ ಬಡ್ತಿ ನೀಡುವುದಕ್ಕೆ ನಿಗದಿಪಡಿಸಿರುವ ಶೈಕ್ಷಣಿಕ ಅಥವಾ ತಾಂತ್ರಿಕ ಅರ್ಹತೆಗಳನ್ನು ಹೊಂದಿದ್ದರೆ, ಮತ್ತು,

(ii) ಬಡ್ತಿ ಹೊಂದುವವರಿಗಾಗಿ ನಿರ್ದಿಷ್ಟಪಡಿಸಿರುವಂತೆ ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಅದೇ ಕ್ಷೇತ್ರದಲ್ಲಿ ಮತ್ತು ಅಷ್ಟೇ ವರ್ಷಗಳಷ್ಟು ಅದೇ ಸ್ವರೂಪದ ಕಾರ್ಯಾನುಭವ ಹೊಂದಿದ್ದರೆ

– ಮಾಜಿ ಸೈನಿಕನು ನಿರ್ದಿಷ್ಟಪಡಿಸಿರುವ ಶೈಕ್ಷಣಿಕ ಅಥವಾ ತಾಂತ್ರಿಕ ಅರ್ಹತೆಯನ್ನು ಹೊಂದಿರುತ್ತಾನೆಂದು ಭಾವಿಸತಕ್ಕದ್ದು.

**ವಿವರಣೆ:–** ಈ ನಿಯಮದ ಉದ್ದೇಶಗಳಿಗಾಗಿ ಮೂರು ವರ್ಷಗಳ ಸೇವಾವಧಿಯನ್ನು ಲೆಕ್ಕ ಹಾಕುವಾಗ, ಮಾಜಿ ಸೈನಿಕನು ಸಿವಿಲ್ ಇಲಾಖೆ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ವಲಯ ಉದ್ಯಮದಲ್ಲಿ ಅಥವಾ ಸ್ವಾಯತ್ತ ಸಂಸ್ಥೆಯಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಂವಾದಿ ಹುದ್ದೆ ಅಥವಾ ಹುದ್ದೆಗಳಲ್ಲಿ ಹಾಗೆ ಸೇವೆ ಸಲ್ಲಿಸುತ್ತಿರುವಾಗ ಸಲ್ಲಿಸಿರುವ ಆ ಯಾವುದೇ ಸೇವಾವಧಿಯನ್ನು ಕೇಂದ್ರದ ಸಶಸ್ತ್ರಪಡೆಗಳಲ್ಲಿ ಸಲ್ಲಿಸಿರುವ ಸೇವಾವಧಿಗೆ ಸೇರಿಸತಕ್ಕದ್ದು][1].

[1][(ಸಿ) ಅಂಥ ಖಾಲಿಸ್ಥಾನಕ್ಕೆ ಅಥವಾ ಹುದ್ದೆಗೆ ಪದವಿಯನ್ನು ಕನಿಷ್ಠ ಶೈಕ್ಷಣಿಕ ಅರ್ಹತೆಯನ್ನಾಗಿ ನಿಗದಿಪಡಿಸಿದ್ದರೆ ಮತ್ತು,–

(i) ತಾಂತ್ರಿಕ ಅಥವಾ ವೃತ್ತಿಪರ ಸ್ವರೂಪದ ಕಾರ್ಯಾನುಭವ ಅಗತ್ಯವಾಗಿರದ ಪಕ್ಷದಲ್ಲಿ; ಅಥವಾ

(ii) ತಾಂತ್ರಿಕೇತರ ವೃತ್ತಿಪರ ಕಾರ್ಯಾನುಭವವನ್ನು ನಿರ್ದಿಷ್ಟಪಡಿಸಿದ್ದಾಗ್ಯೂ, ನೇಮಕ ಪ್ರಾಧಿಕಾರಕ್ಕೆ ಸದರಿ ಹುದ್ದೆಯ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಮಾಜಿ ಸೈನಿಕನು ಅಲ್ಪಾವಧಿವರೆಗೆ ಕೆಲಸ ಮಾಡುತ್ತಿರುವಾಗಲೇ ತರಬೇತಿ ಪಡೆಯುವುದು ಅಪೇಕ್ಷಣೀಯವಾದುದೆಂದು ಮನದಟ್ಟಾದರೆ

– ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಹದಿನೈದು ವರ್ಷಗಳಿಗಿಂತ ಕಡಿಮೆಯಲ್ಲದಷ್ಟು ಸೇವೆ ಸಲ್ಲಿಸಿರುವ ಮೆಟ್ರಿಕ್ಯುಲೇಟ್ ಮಾಜಿ ಸೈನಿಕನನ್ನು ಅದಕ್ಕೆ ಪರಿಗಣಿಸಬಹುದು.

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ "ಮೆಟ್ರಿಕ್ಯುಲೇಟ್ ಮಾಜಿ ಸೈನಿಕ" ಎಂಬುದು ನೌಕಾಪಡೆಯಲ್ಲಿ ಅಥವಾ ವಾಯುಪಡೆಯಲ್ಲಿ ಭಾರತೀಯ ಸೇನಾ ವಿಶೇಷ ಶೈಕ್ಷಣಿಕ ಪ್ರಮಾಣ ಪತ್ರವನ್ನು ಅಥವಾ ತತ್ಸಮಾನ ಪ್ರಮಾಣಪತ್ರವನ್ನು ಪಡೆದಿರುವ ಮಾಜಿ ಸೈನಿಕನನ್ನು ಒಳಗೊಳ್ಳುತ್ತದೆ.][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಎಸ್‌ಎಸ್‌ಆರ್ 86, ದಿನಾಂಕ 4ನೇ ಮೇ 1987 ರಾಜ್ಯಪತ್ರ ದಿನಾಂಕ 18ನೇ ಜೂನ್ 1987ರ ಮೂಲಕ ಸೇರಿಸಲಾಗಿದೆ.

(3) ಸಿ ಗುಂಪು ಅಥವಾ ಡಿ ಗುಂಪಿನ ಅಡಿಯಲ್ಲಿ ಬರುವ ಲಿಪಿಕ ಹುದ್ದೆಯನ್ನು ಹೊರತುಪಡಿಸಿ ಕೇಡರ್‌ನಲ್ಲಿ ಅಥವಾ ಹುದ್ದೆಯಲ್ಲಿ ಮಾಜಿ ಸೈನಿಕರಿಗೆ ಮೀಸಲಿರಿಸಿದ ಯಾವುದೇ ಖಾಲಿಸ್ಥಾನಕ್ಕೆ ನೇಮಕ ಮಾಡುವುದಕ್ಕೆ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾಗಿರಬೇಕೆಂಬ ಕನಿಷ್ಠ ಶೈಕ್ಷಣಿಕ ಅರ್ಹತೆಯನ್ನು ನಿಗದಿಪಡಿಸಿದ್ದರೆ, ನೇಮಕಾತಿ ಪ್ರಾಧಿಕಾರವು ತನ್ನ ವಿವೇಚನಾನುಸಾರ ಭಾರತೀಯ ಸೇನಾ ದರ್ಜೆ–1 ಪರೀಕ್ಷೆಯಲ್ಲಿ ಅಥವಾ ನೌಕಾಪಡೆಯಲ್ಲಿ ಅಥವಾ ವಾಯುಪಡೆಯಲ್ಲಿ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಮತ್ತು ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಕನಿಷ್ಠ 15 ವರ್ಷಗಳಷ್ಟು ಸೇವೆ ಸಲ್ಲಿಸಿರುವ ಮತ್ತು ಅವರ ಅನುಭವ ಹಾಗೂ ಇತರ ಅರ್ಹತೆಗಳ ಕಾರಣದಿಂದಾಗಿ ಸದರಿ ಕೇಡರ್ ಅಥವಾ ಹುದ್ದೆಗೆ ನೇಮಕ ಮಾಡುವುದಕ್ಕಾಗಿ ಅಂಥ ದರ್ಜೆ ಅಥವಾ ಹುದ್ದೆಗೆ ನೇಮಕಾತಿ ಮಾಡಲು ಅನ್ಯಥಾ ಅರ್ಹ ಮತ್ತು ಸೂಕ್ತವೆಂದು ಪರಿಗಣಿಸುವಂಥ ಮಾಜಿ ಸೈನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಅಂಥ ಅರ್ಹತೆಯಿಂದ ವಿನಾಯತಿ ನೀಡಬಹುದಾಗಿದೆ.

(4) ಮಾಜಿ ಸೈನಿಕರಿಗೆ ಮೀಸಲಿರಿಸಿರುವ ನೇರ ನೌಕರಿ ಭರ್ತಿಯ ಖಾಲಿಸ್ಥಾನಕ್ಕೆ ನೇಮಕ ಮಾಡುವುದಕ್ಕಾಗಿ, ಮಾಜಿ ಸೈನಿಕ ಪ್ರವರ್ಗಕ್ಕೆ ಸೇರಿದ ಸಾಕಷ್ಟು ಸಂಖ್ಯೆಯ ಅಭ್ಯರ್ಥಿಗಳು ದೊರೆಯದಿದ್ದರೆ ಅವರಿಗೆ ಹಾಗೆ ಮೀಸಲಿಸಿರುವ ಅಂಥ ಎಲ್ಲಾ ಖಾಲಿ ಸ್ಥಾನಗಳನ್ನು ಸಾಮಾನ್ಯ ಮಾನದಂಡದ ಆಧಾರದ ಮೇಲೆ ತುಂಬುವುದಕ್ಕೆ ಮೀಸಲಾತಿಯ ಕೋಟಾದಲ್ಲಿನ ಕೊರತೆಯನ್ನು ತುಂಬುವುದಕ್ಕಾಗಿ ಅಂಥ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಸಡಿಲಿಸಿದ ಮಾನದಂಡದ ಪ್ರಕಾರ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಹಾಗೆ ಸಡಿಲಿಸುವುದು ಅಂಥ ಅಭ್ಯರ್ಥಿಗಳ ಕಾರ್ಯದಕ್ಷತೆಯ ಮಟ್ಟಕ್ಕೆ ಬಾಧೆಯುಂಟು ಮಾಡತಕ್ಕದ್ದಲ್ಲ ಎಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

[1][**3ಬಿ.** ಬಿಟ್ಟುಬಿಡಲಾಗಿದೆ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 111 ಎಸ್‌ಎಸ್‌ಆರ್ 2002, ದಿನಾಂಕ 3ನೇ ಫೆಬ್ರವರಿ 2004, ರಾಜ್ಯಪತ್ರ ದಿನಾಂಕ 21–2–2004ರ ಮೂಲಕ ಬಿಟ್ಟುಬಿಡಲಾಗಿದೆ.

**4. ನೇಮಕದ ಪ್ರಕ್ರಿಯೆ.–** ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಸೇವೆ ಅಥವಾ ಹುದ್ದೆಗೆ ನೇಮಕಗಳನ್ನು,–

(1) ನೇರ ನೌಕರಿ ಭರ್ತಿಯ ಮೂಲಕ ಮಾಡುವ ನೌಕರಿ ಭರ್ತಿಯ ಸಂದರ್ಭದಲ್ಲಿ,–

(ಎ) ಅದು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕವಾಗಿದ್ದರೆ, ಆಯೋಗ ಅಥವಾ ಇತರ ಪರೀಕ್ಷಾ ಪ್ರಾಧಿಕಾರವು ಸಿದ್ಧಪಡಿಸಿದ ಅಭ್ಯರ್ಥಿಗಳ ಪಟ್ಟಿಯಿಂದ ಅರ್ಹತಾ ಕ್ರಮದಲ್ಲಿ,

(ಬಿ) ಅದು ಆಯ್ಕೆಯ ಮೂಲಕವಾಗಿದ್ದರೆ, ನೇಮಕ ಪ್ರಾಧಿಕಾರವು ನಿರ್ಧರಿಸಬಹುದಾದಂತೆ ನೌಕರಿ ಭರ್ತಿಗೆ ಸಾಕಷ್ಟು ಪ್ರಚಾರವನ್ನು ನೀಡಿದ ತರುವಾಯ, ಸಂದರ್ಭಾನುಸಾರ ಆಯೋಗವು, ಸಲಹಾ ಸಮಿತಿಯು ಅಥವಾ ಆಯ್ಕೆ ಸಮಿತಿಯು ಅಥವಾ ನೇಮಕಾತಿ ಪ್ರಾಧಿಕಾರವು ನಿರ್ಧರಿಸುವ ಅಭ್ಯರ್ಥಿಗಳ ಅರ್ಹತಾ ಕ್ರಮದಲ್ಲಿ [1][xxx][1]

– ಮಾಡತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 31 ಎಸ್‌ಎಸ್‌ಆರ್ 78, ದಿನಾಂಕ 4ನೇ ಫೆಬ್ರವರಿ 1981 ರಾಜ್ಯಪತ್ರ ದಿನಾಂಕ 10–2–81ರ ಮೂಲಕ ಬಿಟ್ಟುಬಿಡಲಾಗಿದೆ.

[1][ಪರಂತು, ಸಂದರ್ಭಾನುಸಾರ ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಆಯ್ಕೆ ಪ್ರಕ್ರಿಯೆಯಲ್ಲಿ ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಒಟ್ಟು ಸಮಾನ ಅಂಕಗಳನ್ನು ಗಳಿಸಿದ್ದರೆ, ಅಂಥ ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ ಅರ್ಹತಾ ಕ್ರಮವನ್ನು ಅವರ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸತಕ್ಕದ್ದು. ವಯಸ್ಸಿನಲ್ಲಿ ಹಿರಿಯನಾದ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಅರ್ಹತಾ ಕ್ರಮದಲ್ಲಿ ಮೇಲೆ ಇಡತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 31 ಎಸ್‌ಎಸ್‌ಆರ್ 78, ದಿನಾಂಕ 4ನೇ ಫೆಬ್ರವರಿ 1981 ರಾಜ್ಯಪತ್ರ ದಿನಾಂಕ 10–2–81ರ ಮೂಲಕ ಸೇರಿಸಲಾಗಿದೆ.

(2) ಬಡ್ತಿ ಮೂಲಕ ನೌಕರಿ ಭರ್ತಿ ಮಾಡುವ ಸಂದರ್ಭದಲ್ಲಿ,–

(ಎ) ಆಯ್ಕೆ ಮಾಡುವ ಮೂಲಕ ಬಡ್ತಿ ನೀಡಿ ತುಂಬಬೇಕಾದ ಹುದ್ದೆಯಾಗಿದ್ದರೆ, ಬಡ್ತಿಗೆ ಅರ್ಹರಾಗಿರುವ ವ್ಯಕ್ತಿಗಳ ಪೈಕಿ ಜೇಷ್ಠತೆಗೆ ಯುಕ್ತ ಗಮನ ನೀಡಿ ಅರ್ಹತೆ ಮತ್ತು ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಎಲ್ಲ ರೀತಿಯಲ್ಲೂ ಸೂಕ್ತತೆಯ ಆಧಾರದ ಮೇಲೆ ವ್ಯಕ್ತಿಯನ್ನು ಆಯ್ಕೆ ಮಾಡುವ ಮೂಲಕ;

(ಬಿ) (ಎ) ಉಪ–ಖಂಡದಲ್ಲಿ ಉಲ್ಲೇಖಿಸಿರುವುದನ್ನು ಹೊರತುಪಡಿಸಿದ ಹುದ್ದೆಯಾಗಿದ್ದರೆ, ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡತಕ್ಕದ್ದು, ಎಂದರೆ ಜೇಷ್ಠತೆಯು, ಬಡ್ತಿಗೆ ಅರ್ಹರಾಗಿರುವ ವ್ಯಕ್ತಿಗಳ ಪೈಕಿಯಿಂದ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಸಾಮರ್ಥ್ಯ ಹೊಂದಿರುವ ಅಭ್ಯರ್ಥಿಯಾಗಿರಬೇಕೆಂಬುದಕ್ಕೆ ಒಳಪಟ್ಟಿರತಕ್ಕದ್ದು.

[1][4ಎ. **ಬಡ್ತಿಯನ್ನು ಬಿಟ್ಟುಕೊಡುವುದು.**– (1) ಬಡ್ತಿ ನೀಡಲಾದ ಸರ್ಕಾರಿ ನೌಕರನು ಅಂಥ ಬಡ್ತಿಯನ್ನು ಹೊಂದಲು ಇಚ್ಛಿಸದಿದ್ದರೆ, ಬಡ್ತಿ ಆದೇಶ ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಹಾಗೆ ನೀಡಲಾದ ಬಡ್ತಿಯನ್ನು ಬಿಟ್ಟುಕೊಡಲು ನೇಮಕ ಪ್ರಾಧಿಕಾರದ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸಬಹುದು ಮತ್ತು ಅಂಥ ಕೋರಿಕೆಯನ್ನು ಪರಿಗಣಿಸಿದ ಮೇಲೆ ಬಡ್ತಿಯನ್ನು ಬಿಟ್ಟುಕೊಡಲು ನೀಡಿರುವ ಕಾರಣಗಳು ಅಂಗೀಕಾರಾರ್ಹವೆಂದು ನೇಮಕ ಪ್ರಾಧಿಕಾರಕ್ಕೆ ಕಂಡು ಬಂದರೆ, ಬಡ್ತಿಯನ್ನು ಬಿಟ್ಟುಕೊಡಲು ಸರ್ಕಾರಿ ನೌಕರನಿಗೆ ಅದು ಅನುಮತಿ ನೀಡಬಹುದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 57 ಎಸ್‌ಎಸ್‌ಆರ್ 2001, ದಿನಾಂಕ 22ನೇ ಮೇ 2002, ರಾಜ್ಯಪತ್ರ ದಿನಾಂಕ 23-5-2002ರ ಮೂಲಕ ಸೇರಿಸಲಾಗಿದೆ.

(2) ಸರ್ಕಾರಿ ನೌಕರನು ಬಡ್ತಿಯನ್ನು ಬಿಟ್ಟುಕೊಡುವ ಅಂಥ ಎಲ್ಲ ಪ್ರಕರಣಗಳಲ್ಲಿ, ಬಡ್ತಿಯನ್ನು ಬಿಟ್ಟುಕೊಡಲು ಆತನು ಅನುಮತಿ ಕೋರಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಥವಾ ಬಡ್ತಿಗಾಗಿ ಪರಿಗಣಿಸಲಾಗುವ ನಿಕಟ ತರುವಾಯದ ದಿನಾಂಕದವರೆಗೆ ಇವುಗಳಲ್ಲಿ ಯಾವುದು ನಂತರದ್ದೋ ಅಲ್ಲಿಯವರೆಗೆ ಆತನನ್ನು ಬಡ್ತಿಗಾಗಿ ಪರಿಗಣಿಸತಕ್ಕದ್ದಲ್ಲ. ಮುಂದೆ ಉನ್ನತ ದರ್ಜೆಗೆ ಬಡ್ತಿ ನೀಡಿದಾಗ ಅಂಥ ಸರ್ಕಾರಿ ನೌಕರನು ಈ ಮೊದಲು ಉನ್ನತ ದರ್ಜೆಗೆ ಬಡ್ತಿ ನೀಡಿದ ಜೇಷ್ಠತೆಯಲ್ಲಿ ತನಗಿಂತ ಕಿರಿಯರಿಗೆ ಸಂಬಂಧಿಸಿದಂತೆ ಪ್ರಶ್ನಿತ ಹುದ್ದೆಗಳನ್ನು ಆಯ್ಕೆ ಮೂಲಕ ತುಂಬಿರಲಿ ಅಥವಾ ಅನ್ಯಥಾ ತುಂಬಿರಲಿ ತನ್ನ ಜೇಷ್ಠತೆಯನ್ನು ಕಳೆದುಕೊಳ್ಳುವನು.

(3) ಸರ್ಕಾರಿ ನೌಕರನು, ಬಡ್ತಿಯನ್ನು ಬಿಟ್ಟುಕೊಡುವುದಕ್ಕೆ ಸಂಬಂಧಿಸಿದಂತೆ ನೀಡಿರುವ ಕಾರಣಗಳನ್ನು ನೇಮಕ ಪ್ರಾಧಿಕಾರವು ಒಪ್ಪಿಕೊಳ್ಳದಿದ್ದರೆ, ಅದನ್ನು ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು. ಅವನು ಅಂಥ ಪತ್ರವನ್ನು ಸ್ವೀಕರಿಸಿದ ಕೂಡಲೇ ಬಡ್ತಿ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅದನ್ನು ದುರ್ವರ್ತನೆ ಎಂದು ಅರ್ಥೈಸತಕ್ಕದ್ದು:

ಪರಂತು, ಮಹಿಳಾ ನೌಕರರು ಬಡ್ತಿಯನ್ನು ಬಿಟ್ಟುಕೊಡುವುದಕ್ಕಾಗಿ ಅನುಮತಿ ಕೋರಿ ಸಲ್ಲಿಸಿರುವ ಅಂಥ ಕೋರಿಕೆಗಳನ್ನು ಸಾಮಾನ್ಯವಾಗಿ ನಿರಾಕರಿಸತಕ್ಕದ್ದಲ್ಲ".][1]

**5. ನೇಮಕಕ್ಕೆ ಸಂಬಂಧಿಸಿದ ಅರ್ಹತೆ.**– (1) ಯಾರೇ ವ್ಯಕ್ತಿಯು,–

(ಎ) ಭಾರತದ ನಾಗರಿಕ; ಅಥವಾ

(ಬಿ) ನೇಪಾಳದ ಪ್ರಜೆ; ಅಥವಾ

(ಸಿ) ಭೂತಾನಿನ ಪ್ರಜೆ; ಅಥವಾ

(ಡಿ) ಭಾರತದಲ್ಲಿ ಖಾಯಂ ಆಗಿ ನೆಲೆಸುವ ಉದ್ದೇಶದಿಂದ 1ನೇ ಜನವರಿ 1962ಕ್ಕಿಂತ ಮುಂಚೆ ಭಾರತಕ್ಕೆ ಬಂದ ಟಿಬೆಟಿನ ನಿರಾಶ್ರಿತ; ಅಥವಾ

(ಇ) ಭಾರತದಲ್ಲಿ ಖಾಯಂ ಆಗಿ ನೆಲೆಸುವ ಉದ್ದೇಶದಿಂದ ಪಾಕಿಸ್ತಾನ, ಬರ್ಮ, ಶ್ರೀಲಂಕಾ ಮತ್ತು ಪೂರ್ವ ಆಫ್ರಿಕಾದ ರಾಷ್ಟ್ರಗಳಾದ ಕೀನ್ಯಾ, ಉಗಾಂಡ, ಟಾಂಝುನಿಯಾ ಸಂಯುಕ್ತ ಗಣರಾಜ್ಯ (ಹಿಂದಿನ ಟಾಂಗನಿಕ ಮತ್ತು ಜಾಂಜಿಬಾರ್) ಝಾಂಬಿಯಾ, ಮಲಾವಿ [1][ಝೈರೆ, ಇಥಿಯೋಪಿಯಾ ಮತ್ತು ವಿಯಟ್ನಾಂ][1] ಗಳಿಂದ ವಲಸೆ ಬಂದಿರುವ ಭಾರತೀಯ ಸಂಜಾತ

– ವ್ಯಕ್ತಿಯಾಗಿದ್ದ ಹೊರತು ರಾಜ್ಯ ಸಿವಿಲ್ ಸೇವೆಗೆ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ:

ಪರಂತು (ಬಿ), (ಸಿ), (ಡಿ) ಅಥವಾ (ಇ) ಪ್ರವರ್ಗಕ್ಕೆ ಸೇರಿದ ವ್ಯಕ್ತಿಯನ್ನು, ಅರ್ಜಿದಾರನು ಯಾವ ರಾಜ್ಯದಲ್ಲಿನ/ ಜಿಲ್ಲೆಯ ಜಿಲ್ಲಾಧಿಕಾರಿ/ ಜಿಲ್ಲಾ ದಂಡಾಧಿಕಾರಿಯವರ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಸಾಮಾನ್ಯ ನಿವಾಸಿಯಾಗಿರುವನೋ ಆ ಜಿಲ್ಲಾಧಿಕಾರಿ/ ಜಿಲ್ಲಾ ದಂಡಾಧಿಕಾರಿಯು ನೀಡಿದ, [2][ವಲಸೆ ದಿನಾಂಕ ಸೂಚಿಸಿರುವ][2] ಅರ್ಹತಾ ಪ್ರಮಾಣಪತ್ರವನ್ನು ಹಾಜರುಪಡಿಸಿದ ಹೊರತು ನೇಮಕಮಾಡತಕ್ಕದ್ದಲ್ಲ:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 1 ಎಸ್‌ಆರ್‌ಆರ್ 79, ದಿನಾಂಕ 9ನೇ ಆಗಸ್ಟ್ 1979, ರಾಜ್ಯಪತ್ರ ದಿನಾಂಕ 23ನೇ ಆಗಸ್ಟ್ 1979ರ ಮೂಲಕ ಪ್ರತಿಯೋಜಿಸಲಾಗಿದೆ.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 25 ಎಸ್‌ಆರ್‌ಆರ್ 80, ದಿನಾಂಕ 20ನೇ ಮೇ 1982, ರಾಜ್ಯಪತ್ರ ದಿನಾಂಕ 1ನೇ ಜುಲೈ 1982ರ ಮೂಲಕ ಸೇರಿಸಲಾಗಿದೆ.

ಮತ್ತೂ ಪರಂತು (ಬಿ), (ಸಿ), (ಡಿ) ಅಥವಾ (ಇ) ವರ್ಗಕ್ಕೆ ಸೇರಿದ ವ್ಯಕ್ತಿಗೆ ಆಯೋಗವು ಅಥವಾ ಇತರ ನೌಕರಿ ಭರ್ತಿ ಪ್ರಾಧಿಕಾರವು ನಡೆಸುವ ಪರೀಕ್ಷೆಗೆ ಅಥವಾ ಸಂದರ್ಶನಕ್ಕೆ ಅವಕಾಶ ನೀಡಬಹುದು.

(2) ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು ಹೊಂದಿರುವ ಯಾರೇ ವ್ಯಕ್ತಿಯು ಮತ್ತು ಈಗಾಗಲೇ ಪತ್ನಿಯನ್ನು ಹೊಂದಿರುವ ವ್ಯಕ್ತಿಯನ್ನು ಮದುವೆಯಾಗಿರುವ ಯಾರೇ ಮಹಿಳೆಯು ರಾಜ್ಯ ಸಿವಿಲ್ ಸೇವೆಯ ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ:

ಪರಂತು, ಹಾಗೆ ಮಾಡಲು ವಿಶೇಷ ಕಾರಣಗಳಿವೆ ಎಂದು ಮನದಟ್ಟಾದರೆ, ಸರ್ಕಾರವು ಯಾರೇ ವ್ಯಕ್ತಿಗೆ ಈ ಉಪ–ನಿಯಮ ಅನ್ವಯವಾಗುವುದರಿಂದ ವಿನಾಯಿತಿ ನೀಡಬಹುದು.

(3) ತನ್ನ ಅಭ್ಯರ್ಥಿಕೆಗಾಗಿ ಅಧಿಕಾರಿಗಳಿಂದ ಅಥವಾ ಅಧಿಕಾರೇತರರಿಂದ ಯಾವುದೇ ವಿಧದಲ್ಲಿ ಬಾಹ್ಯ ಬೆಂಬಲ ಪಡೆದುಕೊಳ್ಳಲು ಪ್ರಯತ್ನಿಸುವ ಯಾರೇ ವ್ಯಕ್ತಿಯು ರಾಜ್ಯ ಸಿವಿಲ್ ಸೇವೆಯ ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ.

(4) ಯಾರೇ ಅರ್ಜಿದಾರನು ತಾನು ಅರ್ಜಿ ಸಲ್ಲಿಸುವ ಸಮಯದಲ್ಲಿ ಸರ್ಕಾರದ ಯಾವುದೇ ಇತರ ಇಲಾಖೆಯಲ್ಲಿ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಈ ಸಂಬಂಧವಾಗಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಪ್ರಾಧಿಕಾರದಲ್ಲಿ ಖಾಯಂ ಅಥವಾ ತಾತ್ಕಾಲಿಕ ನೌಕರಿಯಲ್ಲಿದ್ದರೆ ಮತ್ತು ಆತನು ಯಾರ ಅಧೀನದಲ್ಲಿ ಉದ್ಯೋಗದಲ್ಲಿರುವನೋ ಆ ಇಲಾಖಾ ಮುಖ್ಯಸ್ಥರಿಂದ ಅಥವಾ ಸಂದರ್ಭಾನುಸಾರ ಸರ್ಕಾರದಿಂದ ಅಥವಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯದೆಯೇ ಅರ್ಜಿಯನ್ನು ಸಲ್ಲಿಸಿದ್ದರೆ, ಆತನು ಸರ್ಕಾರದ ಯಾವುದೇ ಇಲಾಖೆಯಲ್ಲಿನ ಹುದ್ದೆಯ ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಈ ಉಪ ನಿಯಮವು, ಸರ್ಕಾರದ ಯಾವುದೇ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ನೇಮಕಗೊಂಡಿರುವ ವ್ಯಕ್ತಿಗೆ ಅವನನ್ನು ಎಲ್ಲಿಯವರೆಗೆ ಹಾಗೆಂದು ಪರಿಗಣಿಸಲಾಗುವುದೋ ಅಲ್ಲಿಯವರೆಗೆ ಅನ್ವಯವಾಗತಕ್ಕದ್ದಲ್ಲ.

(5) [1][ಕನ್ನಡವನ್ನು ಒಂದು ಭಾಷೆಯನ್ನಾಗಿ ತೆಗೆದುಕೊಂಡು ಯಾವುದೇ ಭಾಷೆಯಲ್ಲಿ [2][ಏಳನೇ ತರಗತಿಯ][2] ಪರೀಕ್ಷೆಯಲ್ಲಿ ಉತ್ತೀರ್ಣನಾಗಿರದ ಮತ್ತು ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962ರ ಅಡಿಯಲ್ಲಿ ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿ ಸೇವೆ ಸಲ್ಲಿಸಲು ಇಚ್ಛೆ ವ್ಯಕ್ತಪಡಿಸದ ಯಾರೇ ವ್ಯಕ್ತಿಯನ್ನು ರಾಜ್ಯದ ಯಾವುದೇ ಸಿವಿಲ್ ಸೇವೆಗಳ ಯಾವುದೇ [1][ಡಿ ಗುಂಪಿನ][1] ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ ಮತ್ತು [1][ಡಿ ಗುಂಪಿನ][1] ಹುದ್ದೆಗೆ ನೇಮಕಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯೂ ನೇಮಕ ಪ್ರಾಧಿಕಾರವು ಹಾಗೆ ಅಗತ್ಯಪಡಿಸಿದ ಪಕ್ಷದಲ್ಲಿ ಯಾವುದೇ ಸಮಯದಲ್ಲಾದರೂ ಗೃಹ ರಕ್ಷಕ ದಳದ ಸದಸ್ಯನಾಗಿ ಸೇವೆ ಸಲ್ಲಿಸಲು ಬದ್ಧನಾಗಿರತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 37 ಎಸ್ಎಸ್ಆರ್ 91, ದಿನಾಂಕ 27.7.1996ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 74 ಎಸ್ಎಸ್ಆರ್ 2002, ದಿನಾಂಕ 29ನೇ ಜನವರಿ 2003, ರಾಜ್ಯಪತ್ರ ದಿನಾಂಕ 30ನೇ ಜನವರಿ 2003ರ ಮೂಲಕ ಪ್ರತಿಯೋಜಿಸಲಾಗಿದೆ.

(6) ಯಾರೇ ವ್ಯಕ್ತಿಯು, ಆತನು ಅಥವಾ ಆಕೆಯು,–

(ಎ) ಯಾವುದೇ ಸಂಸ್ಥೆ ಅಥವಾ ಸಂಘವನ್ನು ಕಾನೂನುಬಾಹಿರ ಸಂಸ್ಥೆ ಅಥವಾ ಸಂಘವೆಂದು ಘೋಷಿಸಿದ ತರುವಾಯ, ಅಂಥ ಸಂಸ್ಥೆ ಅಥವಾ ಸಂಘಕ್ಕೆ ಸದಸ್ಯನಾದರೆ ಅಥವಾ ಸದಸ್ಯನಾಗಿದ್ದರೆ, ಅಥವಾ ಆತನು ಅಥವಾ ಆಕೆಯು ಅದರೊಂದಿಗೆ ಸಂಬಂಧವನ್ನು ಹೊಂದಿದ್ದರೆ; ಅಥವಾ

(ಬಿ) (i) ಭಾರತ ಸಂವಿಧಾನವನ್ನು ಬುಡಮೇಲು ಮಾಡುವ ಗುರಿ ಹೊಂದಿರುವ;

(ii) ಹಿಂಸೆಯನ್ನು ಒಳಗೊಂಡಿರುವ ಕಾನೂನಿನ ಸಂಘಟಿತ ಉಲ್ಲಂಘನೆ ಅಥವಾ ಪ್ರತಿಭಟನೆಯ ಗುರಿಯನ್ನು ಹೊಂದಿರುವ;

(iii) ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ ಅಥವಾ ಭದ್ರತೆಯ ಹಿತಾಸಕ್ತಿಗಳಿಗೆ ಹಾನಿಯುಂಟುಮಾಡುವ; ಅಥವಾ

(iv) ಜನರ ವಿವಿಧ ವರ್ಗಗಳ ನಡುವೆ ಧರ್ಮ, ಜನಾಂಗ, ಭಾಷೆ, ಜಾತಿ ಅಥವಾ ಸಮುದಾಯ ಭಾವನೆಗಳ ಆಧಾರದ ಮೇಲೆ ಶತೃತ್ವವನ್ನು ಅಥವಾ ದ್ವೇಷವನ್ನು ಬೆಳೆಸುವಂಥ

– ಯಾವುದೇ ಚಟುವಟಿಕೆಯಲ್ಲಿ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಿದಿದ್ದರೆ ಅಥವಾ ಸಂಬಂಧ ಹೊಂದಿದ್ದರೆ; ಅಥವಾ

(ಸಿ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ವಜಾ ಆಗಿದ್ದರೆ;

(ಡಿ) ಕೇಂದ್ರ ಅಥವಾ ಯಾವುದೇ ರಾಜ್ಯ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆ ಅಥವಾ ಆಯ್ಕೆಗಳಿಗೆ ಹಾಜರಾಗಲು ಖಾಯಂ ಆಗಿ ನಿಷೇಧಿತನಾದಾಗ ಅಥವಾ ನಿಷೇಧಿತನಾಗಿದ್ದರೆ ಅಥವಾ ಅನರ್ಹನಾದಾಗ ಅಥವಾ ಅನರ್ಹಗೊಳಿಸಿದ್ದರೆ

– ರಾಜ್ಯ ಸಿವಿಲ್ ಸೇವೆಯ ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(7) ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾಗಿರುವ ಅಥವಾ ಅಪರಾಧ ನಿರ್ಣೀತನಾಗಿದ್ದ ಅಥವಾ ಕೇಂದ್ರ ಲೋಕಸೇವಾ ಆಯೋಗ ಅಥವಾ ಯಾವುದೇ ರಾಜ್ಯದ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆ ಅಥವಾ ಆಯ್ಕೆಗಳಿಗೆ ಹಾಜರಾಗುವುದರಿಂದ ತಾತ್ಕಾಲಿಕವಾಗಿ ನಿಷೇಧಿತನಾಗಿದ್ದ ಅಥವಾ ಅನರ್ಹನಾಗಿರುವ ಅಥವಾ ಅನರ್ಹನಾಗಿದ್ದ ಯಾರೇ ವ್ಯಕ್ತಿಯನ್ನು, ಸರ್ಕಾರವು ಎಲ್ಲಾ ಸನ್ನಿವೇಶಗಳನ್ನು ಅವಲೋಕನ

ಮಾಡಿದ ತರುವಾಯ ಆತನು ಅಂಥ ನೇಮಕಾತಿಗೆ ಸೂಕ್ತನೆಂದು ಪರಿಗಣಿಸಿದ ಹೊರತು, ರಾಜ್ಯ ಸಿವಿಲ್ ಸೇವೆಗೆ ಸಾಮಾನ್ಯವಾಗಿ ನೇಮಕ ಮಾಡತಕ್ಕದ್ದಲ್ಲ.

**6. ನೇಮಕಕ್ಕೆ ವಯೋಮಿತಿ.–** [1][(1) ವಿಶೇಷವಾಗಿ ರಚಿಸಿದ ಮತ್ತು ಹೆಚ್ಚಿನ ವಯೋಮಿತಿಯನ್ನು ನಿಗದಿಪಡಿಸಿರುವ ಯಾವುದೇ ಸೇವೆ ಅಥವಾ ಹುದ್ದೆಗೆ ಅನ್ವಯಿಸುವ ನೌಕರಿ ಭರ್ತಿ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ನೇರ ನೌಕರಿ ಭರ್ತಿಯ ಮೂಲಕ ನೇಮಕ ಮಾಡಿಕೊಳ್ಳಬೇಕಾದ ಪ್ರತಿಯೊಬ್ಬ ಅಭ್ಯರ್ಥಿಯೂ ಹದಿನೆಂಟು ವರ್ಷ ವಯಸ್ಸಿನವನಾಗಿರತಕ್ಕದ್ದು; ಮತ್ತು ಅರ್ಜಿ ಸ್ವೀಕರಿಸುವುದಕ್ಕಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಥವಾ ನೇಮಕ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಇತರ ದಿನಾಂಕದಂದು,–

[2][(ಎ) ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಅಥವಾ ಹಿಂದುಳಿದ ವರ್ಗಗಳ ಪ್ರವರ್ಗ–Iಕ್ಕೆ ಸೇರಿದ ಅಭ್ಯರ್ಥಿಯಾದರೆ [3][ಮೂವತ್ತೆಂಟು ವರ್ಷ][3];

(ಬಿ) ಹಿಂದುಳಿದ ವರ್ಗಗಳ ಪ್ರವರ್ಗ –II (ಎ) ಅಥವಾ II (ಬಿ), III(ಎ) ಅಥವಾ III (ಬಿ)ಗೆ ಸೇರಿದ ಅಭ್ಯರ್ಥಿಯಾದರೆ [3][ಮೂವತ್ತಾರು ವರ್ಷ][3]; ಮತ್ತು

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 33 ಎಸ್‌ಎಸ್‌ಆರ್ 78, ದಿನಾಂಕ 31ನೇ ಮಾರ್ಚ್ 1979 ರಾಜ್ಯಪತ್ರ ದಿನಾಂಕ 5ನೇ ಏಪ್ರಿಲ್ 1979ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಎಸ್‌ಆರ್ 95, ದಿನಾಂಕ 25ನೇ ಜುಲೈ 1995 ರಾಜ್ಯಪತ್ರ ದಿನಾಂಕ 10–8–95ರ ಮೂಲಕ ಪ್ರತಿಯೋಜಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಆರ್ 91, ದಿನಾಂಕ 30.10.1991ರ ಮೂಲಕ ಪ್ರತಿಯೋಜಿಸಲಾಗಿದೆ.

(ಸಿ) ಯಾರೇ ಇತರ ವ್ಯಕ್ತಿಯಾದರೆ [1][ಮೂವತ್ತ ಮೂರು ವರ್ಷ][1]

– ಮೀರಿದ ವಯಸ್ಸಿನವನಾಗಿರತಕ್ಕದ್ದಲ್ಲ.][2]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಆರ್ 91, ದಿನಾಂಕ 30.10.1991ರ ಮೂಲಕ ಪ್ರತಿಯೋಜಿಸಲಾಗಿದೆ.

[1][ಪರಂತು, ಮರಳಿ ದೇಶಕ್ಕೆ ಬಂದಿರುವ ಈ ಮುಂದಿನ ವ್ಯಕ್ತಿಗಳ ಪ್ರಕರಣಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಮಾಡುವ ನೌಕರಿ ಭರ್ತಿಗೆ ಗರಿಷ್ಠ ವಯೋಮಿತಿಯನ್ನು ಮೂರು ವರ್ಷಗಳಷ್ಟು ಮತ್ತು ಇತರ ನೌಕರಿ ಭರ್ತಿಗೆ ನಲವತ್ತೈದು ವರ್ಷಗಳವರೆಗೆ ಸಡಿಲಗೊಳಿಸತಕ್ಕದ್ದು ಮತ್ತು ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ಇದನ್ನು ಮತ್ತೆ ಐದು ವರ್ಷಗಳಷ್ಟು ಸಡಿಲಗೊಳಿಸತಕ್ಕದ್ದು, ಎಂದರೆ:–

(ಎ) 1ನೇ ಜನವರಿ 1964ರಂದು ಅಥವಾ ಆನಂತರ, ಆದರೆ 26ನೇ ಮಾರ್ಚ್ 1971ಕ್ಕಿಂತ ಮೊದಲು ಪೂರ್ವ ಪಾಕಿಸ್ತಾನ (ಈಗಿನ ಬಾಂಗ್ಲಾದೇಶ) ದಿಂದ ಭಾರತಕ್ಕೆ ವಲಸೆ ಬಂದ ಭಾರತೀಯ ಸಂಜಾತ ವ್ಯಕ್ತಿಗಳು;

(ಬಿ) 1ನೇ ಜೂನ್ 1963ರಂದು ಅಥವಾ ಆನಂತರ ಬರ್ಮಾದಿಂದ ವಲಸೆ ಬಂದ ಭಾರತೀಯ ಸಂಜಾತ ವ್ಯಕ್ತಿಗಳು ಮತ್ತು 1ನೇ ನವೆಂಬರ್ 1964ರಂದು ಅಥವಾ ಆನಂತರ ಸಿಲೋನ್ (ಈಗಿನ ಶ್ರೀಲಂಕಾ)ದಿಂದ ತಾಯ್ನಾಡಿಗೆ ಮರಳಿಬಂದವರು;

(ಸಿ) ಪೂರ್ವ ಆಫ್ರಿಕ ರಾಷ್ಟ್ರಗಳಾದ ಕೀನ್ಯಾ, ಉಗಾಂಡ ಮತ್ತು ಟಾಂಝುನಿಯಾ ಸಂಯುಕ್ತ ಗಣರಾಜ್ಯಗಳಿಂದ ವಲಸೆ ಬಂದ ಭಾರತೀಯ ಸಂಜಾತ ವ್ಯಕ್ತಿಗಳು;

(ಡಿ) ವಿಯಟ್ನಾಂನಿಂದ ವಲಸೆ ಬಂದ ಭಾರತೀಯ ಸಂಜಾತ ವ್ಯಕ್ತಿಗಳು][1].

[2][(2) ಯಾವುದೇ ಸೇವೆ ಅಥವಾ ಹುದ್ದೆಯ ನೌಕರಿ ಭರ್ತಿಗೆ (1)ನೇ ಉಪ–ನಿಯಮದಲ್ಲಿ ನಿಗದಿಪಡಿಸಿರುವ ವಯೋಮಿತಿಗಳನ್ನು ಹೊರತುಪಡಿಸಿ ಗರಿಷ್ಠ ವಯೋಮಿತಿಗಳನ್ನು ನಿಗದಿಪಡಿಸಿದ್ದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗಗಳ ಪ್ರವರ್ಗ–I, ಪ್ರವರ್ಗ– II(ಎ), ಪ್ರವರ್ಗ– II(ಬಿ), ಪ್ರವರ್ಗ– III(ಎ), ಪ್ರವರ್ಗ– III(ಬಿ) ಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಹೆಚ್ಚಿಸಿದ ವಯೋಮಿತಿಗಾಗಿ ನೌಕರಿ ಭರ್ತಿ ನಿಯಮಗಳನ್ನು ಉಪಬಂಧಿಸಿದ್ದ ಹೊರತು, ಗರಿಷ್ಠ ವಯೋಮಿತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಇತರ ಹಿಂದುಳಿದ ವರ್ಗಗಳ ಪ್ರವರ್ಗ– Iಕ್ಕೆ ಸೇರಿದ ಯಾರೇ ಅಭ್ಯರ್ಥಿಯ ಸಂದರ್ಭದಲ್ಲಿ ಐದು ವರ್ಷಗಳಷ್ಟು ಮತ್ತು ಇತರ ಹಿಂದುಳಿದ ವರ್ಗಗಳ ಪ್ರವರ್ಗ–II (ಎ), ಪ್ರವರ್ಗ–II (ಬಿ), ಪ್ರವರ್ಗ–III (ಎ), ಅಥವಾ ಪ್ರವರ್ಗ–III (ಬಿ) ಗಳಿಗೆ ಸೇರಿದ ಯಾರೇ ಅಭ್ಯರ್ಥಿಯ ಸಂದರ್ಭದಲ್ಲಿ ಮೂರು ವರ್ಷಗಳಷ್ಟು ಹೆಚ್ಚಿಸಲಾಗಿದೆಯೆಂದು ಭಾವಿಸತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 25 ಎಸ್‌ಎಸ್‌ಆರ್ 80, ದಿನಾಂಕ 20ನೇ ಮೇ 1982 ರಾಜ್ಯಪತ್ರ ದಿನಾಂಕ 1ನೇ ಜುಲೈ 1982ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಎಸ್‌ಆರ್ 95, ದಿನಾಂಕ 25ನೇ ಜುಲೈ 1995 ರಾಜ್ಯಪತ್ರ ದಿನಾಂಕ 10–8–95ರ ಮೂಲಕ ಪ್ರತಿಯೋಜಿಸಲಾಗಿದೆ.

[1][(2ಎ) ಯಾವುದೇ ಸೇವೆ ಅಥವಾ ಹುದ್ದೆಯ ನೌಕರಿ ಭರ್ತಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ವಯೋಮಿತಿಗಳು (1)ನೇ ಉಪನಿಯಮದಲ್ಲಿ ನಿಗದಿಪಡಿಸಿರುವುದಕ್ಕಿಂತ ಕಡಿಮೆಯಿದ್ದರೂ, ಸದರಿ (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ವಯೋಮಿತಿಗಳನ್ನು ಸದರಿ ಸೇವೆ ಅಥವಾ ಹುದ್ದೆಯ ನೌಕರಿ ಭರ್ತಿಗೆ ಸಂಬಂಧಿಸಿದಂತೆ ಅವುಗಳಲ್ಲಿ ನಿರ್ದಿಷ್ಟಪಡಿಸಿದ ವರ್ಗ ಅಥವಾ ವ್ಯಕ್ತಿಗಳ ಸಂಬಂಧದಲ್ಲಿ ಅನುಕ್ರಮವಾಗಿ ಗರಿಷ್ಠ ವಯೋಮಿತಿಗಳಾಗಿರುತ್ತವೆಂದು ಭಾವಿಸತಕ್ಕದ್ದು.

**ಉಳಿಸುವಿಕೆಗಳು.–** ಈ ನಿಯಮಗಳು ಪ್ರಾರಂಭಕ್ಕೆ ಬಂದ ದಿನಾಂಕದಂದು ಸದರಿ ಸೇವೆಯಲ್ಲಿನ ಯಾವುದೇ ಸೇವೆ ಅಥವಾ ಹುದ್ದೆಗೆ ನೌಕರಿ ಭರ್ತಿಯು ಬಾಕಿ ಉಳಿದಿದ್ದರೆ, ಅದನ್ನು ಈ ನಿಯಮಗಳು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಅಂತಿಮಗೊಳಿಸತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 33, ಎಸ್‌ಆರ್‌ಆರ್ 78, ದಿನಾಂಕ 31–3–1979 ರಾಜ್ಯಪತ್ರ ದಿನಾಂಕ 5–4–1979ರ ಮೂಲಕ ಪ್ರತಿಯೋಜಿಸಲಾಗಿದೆ.

(3) (1)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ನೇಮಕಕ್ಕೆ ಗರಿಷ್ಠ ವಯೋಮಿತಿಯನ್ನು ಈ ಮುಂದಿನ ಪ್ರಕರಣಗಳಲ್ಲಿ ಮುಂದೆ ಹೇಳಿರುವಷ್ಟರಮಟ್ಟಿಗೆ ಹೆಚ್ಚಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:–

(ಎ) ಸಚಿವರ, ರಾಜ್ಯ ಸಚಿವರ ಅಥವಾ ಉಪ ಸಚಿವರ ಆಪ್ತ ಸಿಬ್ಬಂದಿಯ ಡಿ ಗುಂಪಿನ ಹುದ್ದೆಗೆ ನೇಮಕ ಮಾಡಿಕೊಳ್ಳುವ ಅಭ್ಯರ್ಥಿಯ ಸಂದರ್ಭದಲ್ಲಿ, ಅಂಥ ನೇಮಕವು, ಅಂಥ ಸಚಿವರ, ರಾಜ್ಯ ಸಚಿವರ ಅಥವಾ ಉಪ ಸಚಿವರ ಪದಾವಧಿಯು ಇರುವವರೆಗೆ ಮಾತ್ರ ಆಗಿದ್ದ ಪಕ್ಷದಲ್ಲಿ, ಐದು ವರ್ಷಗಳಷ್ಟು;

(ಬಿ) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ [1][ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪಿಸಲಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿನ ಸರ್ಕಾರದಿಂದ ಸ್ಥಾಪಿತವಾಗಿದ್ದು ಮತ್ತು ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ನಿಗಮದ ಅಡಿಯಲ್ಲಿ][1] ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಧಾರಣ ಮಾಡಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ ಆತ ಅಂಥ ಹುದ್ದೆಯನ್ನು ಧಾರಣ ಮಾಡಿರುವಷ್ಟು ಅಥವಾ ಧಾರಣ ಮಾಡಿದ್ದಷ್ಟು ಅಥವಾ [2][ಹತ್ತು][2] ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು;

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 2, ಎಸ್‌ಆರ್‌ಆರ್ 77, ದಿನಾಂಕ 18.11.1980ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 39, ಎಸ್‌ಎಲ್‌ಸಿ 85(1), ದಿನಾಂಕ 5.9.1986ರ ಮೂಲಕ ಪ್ರತಿಯೋಜಿಸಲಾಗಿದೆ.

(ಸಿ) ಮಾಜಿ ಸೈನಿಕನಾಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ ಮೂರು ವರ್ಷಗಳು ಮತ್ತು ಇದಕ್ಕೆ ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಅವನು ಸೇವೆ ಸಲ್ಲಿಸಿರುವಷ್ಟು ವರ್ಷಗಳನ್ನು ಸೇರಿಸಬೇಕು.

[1][**ಉಳಿಸುವಿಕೆಗಳು.–** ಸದರಿ ನಿಯಮಗಳಿಗೆ 2ನೇ ನಿಯಮದ ಮೂಲಕ ಮಾಡಿರುವ ತಿದ್ದುಪಡಿಯಲ್ಲಿ ಏನೇ ಇದ್ದರೂ, ಈ ನಿಯಮಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಜಾಹೀರಾತು ನೀಡಿರುವ ಯಾವುದೇ ಸೇವೆ ಅಥವಾ ಹುದ್ದೆಗೆ ಮಾಡುವ ನೌಕರಿ ಭರ್ತಿಯನ್ನು ಸದರಿ ನಿಯಮಗಳನ್ನು ಈ ನಿಯಮಗಳ ಮೂಲಕ ತಿದ್ದುಪಡಿ ಮಾಡಿರದಿದ್ದರೆ ಹೇಗೆ ಮಾಡಲಾಗುತ್ತಿತ್ತೋ ಹಾಗೆ ಮಾಡತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 69, ಎಸ್‌ಆರ್‌ಆರ್ 76, ದಿನಾಂಕ 2–12–1980 ರ ಮೂಲಕ ಸೇರಿಸಲಾಗಿದೆ.

(ಡಿ) ಪೂರ್ಣಾವಧಿ ಕೆಡೆಟ್ ಇನ್‌ಸ್ಟ್ರಕ್ಟರ್ ಆಗಿ ಸೇವೆ ಸಲ್ಲಿಸಿದ ತರುವಾಯ, ರಾಷ್ಟ್ರೀಯ ಕೆಡೆಟ್ ದಳದಿಂದ ಬಿಡುಗಡೆ ಮಾಡಿದ ಅಭ್ಯರ್ಥಿಯ ಸಂದರ್ಭದಲ್ಲಿ, ಹಾಗೆ ಕೆಡೆಟ್ ಇನ್‌ಸ್ಟ್ರಕ್ಟರಾಗಿ ಆತನು ಸೇವೆ ಸಲ್ಲಿಸಿರುವಷ್ಟು ವರ್ಷಗಳು;

(ಇ) ರಾಜ್ಯ ಸರ್ಕಾರ ಪ್ರಾಯೋಜಿತ ಗ್ರಾಮೀಣ ಕೈಗಾರಿಕೀಕರಣ ಯೋಜನೆಯಲ್ಲಿ ನೇಮಕಗೊಂಡ ಗ್ರಾಮ ಸಮೂಹ ಇನ್ಸ್‌ಪೆಕ್ಟರ್ ಆಗಿರುವ ಅಥವಾ ಆಗಿದ್ದಂಥ ಅಭ್ಯರ್ಥಿಯ ಸಂದರ್ಭದಲ್ಲಿ ಅಂಥ ಗ್ರಾಮ ಸಮೂಹ ಇನ್ಸ್‌ಪೆಕ್ಟರಾಗಿ ಆತ ಸೇವೆ ಸಲ್ಲಿಸಿರುವಷ್ಟು ವರ್ಷಗಳು;

(ಎಫ್) ಅಂಗವಿಕಲನಾಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ, ಹತ್ತು ವರ್ಷಗಳು;

(ಜಿ) ಮೈಸೂರಿನ ಮಾಜಿ ಮಹಾರಾಜರ ಸಿಬ್ಬಂದಿಯ ಸದಸ್ಯನಾಗಿರುವ ಅಥವಾ ಆಗಿದ್ದಂಥ ಅಭ್ಯರ್ಥಿಯ ಸಂದರ್ಭದಲ್ಲಿ ಆತ ಹಾಗೆ ಸದಸ್ಯನಾಗಿರುವಷ್ಟು ಅಥವಾ ಸದಸ್ಯನಾಗಿದ್ದಷ್ಟು ವರ್ಷಗಳು;

(ಹೆಚ್) ಈ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಧಾರಣ ಮಾಡಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ ಅಂಥ ಹುದ್ದೆಯನ್ನು ಆತನು ಧಾರಣ ಮಾಡಿರುವಷ್ಟು ಅಥವಾ ಧಾರಣ ಮಾಡಿದ್ದಷ್ಟು ವರ್ಷಗಳು ಅಥವಾ ಐದು ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು;

(ಐ) ಅಭ್ಯರ್ಥಿ ವಿಧವೆಯಾಗಿರುವಾಗ, ಹತ್ತು ವರ್ಷಗಳು;

[1][**ವಿವರಣೆ.–** ಬಿಟ್ಟುಬಿಡಲಾಗಿದೆ][1]

[2][(ಜೆ) ಜೀತ ಕಾರ್ಮಿಕನಾಗಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ, ಹತ್ತು ವರ್ಷಗಳು][2];

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 37 ಎಸ್‌ಎಸ್‌ಆರ್ 77 ದಿನಾಂಕ 8-2-1979 ರಾಜ್ಯಪತ್ರ ದಿನಾಂಕ 22-2-1979ರ ಮೂಲಕ ಬಿಟ್ಟುಬಿಡಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 58 ಎಸ್‌ಎಸ್‌ಆರ್ 80, ದಿನಾಂಕ 5-11-1982 ರಾಜ್ಯಪತ್ರ ದಿನಾಂಕ 22-12-1982ರ ಮೂಲಕ ಸೇರಿಸಲಾಗಿದೆ.

(ಕೆ) ನವದೆಹಲಿಯಲ್ಲಿರುವ ನಿವಾಸಿ ಆಯುಕ್ತರ ಕಚೇರಿಯಲ್ಲಿನ ಮತ್ತು ಕರ್ನಾಟಕ ಭವನದಲ್ಲಿನ ಬಿ ಗುಂಪಿಗೆ, ಸಿ ಅಥವಾ ಡಿ ಗುಂಪಿನ ಹುದ್ದೆಯ ನೇಮಕಕ್ಕೆ ಅಭ್ಯರ್ಥಿಯಾಗಿರುವ ವ್ಯಕ್ತಿಯ ಸಂದರ್ಭದಲ್ಲಿ ಎಂಟು ವರ್ಷಗಳು;

(4) 1974ರ ಜೂನ್ 18ಕ್ಕೆ ಮುಂಚೆ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಮಾಡಿರುವ ಯಾವುದೇ ನೇಮಕಕ್ಕೆ ಸಂಬಂಧಪಟ್ಟಂತೆ (1) ರಿಂದ (3)ನೇ ಉಪನಿಯಮದ ಯಾವುದೇ ಉಪಬಂಧಗಳನ್ನು ಸಡಿಲಿಸುವುದು ಅಗತ್ಯವೆಂದು ಮತ್ತು ಯುಕ್ತವೆಂದು ಸರ್ಕಾರವು ಅಭಿಪ್ರಾಯಪಟ್ಟರೆ ಅದನ್ನು ಲಿಖಿತದಲ್ಲಿ ದಾಖಲಿಸಿ, ಹಾಗೆ ಸಡಿಲಿಸಬಹುದು.

**7. ಕಡ್ಡಾಯ ನಿವೃತ್ತಿಯ ದಿನಾಂಕದ ನಂತರ ಬಡ್ತಿ.–** ಕಡ್ಡಾಯನಿವೃತ್ತಿಯ ಅಥವಾ ವಯೋನಿವೃತ್ತಿಯ ದಿನಾಂಕದ ತರುವಾಯ ಸೇವೆಯಲ್ಲಿ ಉಳಿಸಿಕೊಂಡಿರುವ ಯಾರೇ ಸರ್ಕಾರೀ ನೌಕರನಿಗೆ ಇನ್ನೊಂದು ಹುದ್ದೆಗೆ ಬಡ್ತಿ ನೀಡತಕ್ಕದ್ದಲ್ಲ:

ಪರಂತು, ಸರ್ಕಾರಿ ಆದೇಶ ಸಂಖ್ಯೆ ಜಿಎಡಿ 3 ಡಿಟಿಬಿ 58 ದಿನಾಂಕ 14ನೇ ಆಗಸ್ಟ್ 1958 ಮತ್ತು 5ನೇ ನವೆಂಬರ್ 1958 ಇವುಗಳ ಅನುಸಾರವಾಗಿ ಕಡ್ಡಾಯ ನಿವೃತ್ತಿಯ ಅಥವಾ ವಯೋ ನಿವೃತ್ತಿಯ ದಿನಾಂಕದ ನಂತರವೂ ಸೇವೆಯಲ್ಲಿ ಉಳಿಸಿಕೊಂಡಿರುವ ಸರ್ಕಾರಿ ನೌಕರನಿಗೆ ಈ ನಿಯಮದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

[1][ಮತ್ತೂ ಪರಂತು, ಕರ್ನಾಟಕ ಸಿವಿಲ್ ಸೇವಾ ನಿಯಮಗಳ 95ನೇ ನಿಯಮದ (ಎ) ಖಂಡದ ಪರಂತುಕಕ್ಕನುಸಾರವಾಗಿ ತಿಂಗಳಿನ ಕೊನೆ ದಿನದವರೆಗೆ ಸೇವೆಯಲ್ಲಿ ಇರಿಸಿಕೊಂಡಿರುವ ಸರ್ಕಾರಿ ನೌಕರನಿಗೆ ಈ ನಿಯಮದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 44, ಎಸ್‌ಆರ್‌ಆರ್ 80, ದಿನಾಂಕ 6.1.1981ರ ಮೂಲಕ ಸೇರಿಸಲಾಗಿದೆ.

**8. ನೇಮಕಾತಿಗಳು ಅಥವಾ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಉಪಬಂಧ.–** [1][ಬಿಟ್ಟುಬಿಡಲಾಗಿದೆ][1] ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ಭಾರತ ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ನಿಗದಿಪಡಿಸಿರುವ ಪ್ರಮಾಣದಷ್ಟು ಮತ್ತು ರೀತಿಗನುಸಾರವಾಗಿ ನೇಮಕಗಳನ್ನು ಅಥವಾ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಎಸ್‌ಆರ್ 95 ದಿನಾಂಕ 21.10.1995ರ ಮೂಲಕ ಬಿಟ್ಟುಬಿಡಲಾಗಿದೆ.

[1][ಪರಂತು, ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಲಾದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಇದ್ದರೂ ಬಡ್ತಿ ಕೋಟಾದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು 1978ರ ಏಪ್ರಿಲ್ 27ರಿಂದ ಜಾರಿಗೆ ಬರುವಂತೆ ನಿರ್ಧರಿಸತಕ್ಕದ್ದು ಮತ್ತು ಅನುಷ್ಠಾನಗೊಳಿಸತಕ್ಕದ್ದು.

**ಸೂಚನೆ:** ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆ ಎಂದರೆ, 1978ರ ಏಪ್ರಿಲ್ 27ರಿಂದ ಲೆಕ್ಕ ಹಾಕಿದಂತೆ ಎ ಗುಂಪಿನ ಅತ್ಯಂತ ಕೆಳವರ್ಗದ ಮಟ್ಟದವರೆಗೆ ರೋಸ್ಟರ್ ಪದ್ಧತಿ ಪ್ರಕಾರ ಲಭ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆಯ ಪ್ರಮಾಣ ಎಂದು ಅರ್ಥ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್‌ಎಸ್‌ಆರ್ 92 ದಿನಾಂಕ 1ನೇ ಏಪ್ರಿಲ್ 1992 ರಾಜ್ಯಪತ್ರ ದಿನಾಂಕ 1-4-92ರ ಮೂಲಕ ಸೇರಿಸಲಾಗಿದೆ.

**9. ಮಾಜಿ ಸೈನಿಕರಿಗೆ, [1][ದೈಹಿಕ ಅಂಗವಿಕಲರು][1] ಮತ್ತು [2][ಯೋಜನೆಯಿಂದ ನಿರಾಶ್ರಿತರಾದ ಕುಟುಂಬದ ಸದಸ್ಯರಿಗೆ][2], [ಮಹಿಳೆಯರಿಗೆ] ಮತ್ತು [ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ] ಅವಕಾಶ.–** [3][(1) ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಅಂಥ ನೌಕರಿ ಭರ್ತಿ ನಿಯಮಗಳಲ್ಲಿ ನೇರ ನೌಕರಿ ಭರ್ತಿಯನ್ನು ಒಂದು ನೌಕರಿ ಭರ್ತಿಯ ವಿಧಾನವನ್ನಾಗಿ ನಿಯಮಿಸಲಾಗಿದ್ದರೆ [4][ಅಂಥ ವಿಧಾನದ ಮೂಲಕ ನೇಮಕ ಮಾಡುವುದಕ್ಕಾಗಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು

ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಶೇಕಡಾ ಹತ್ತರಷ್ಟು ಹುದ್ದೆಗಳನ್ನು ಮಾಜಿ ಸೈನಿಕರು ಮತ್ತು][4] ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗ ಮರಣ ಹೊಂದಿದ ಅಥವಾ ಶಾಶ್ವತ ಅಂಗವೈಕಲ್ಯಕ್ಕೊಳಗಾದ ವ್ಯಕ್ತಿಗಳ ಕುಟುಂಬದ ಸದಸ್ಯರಿಗಾಗಿ ಮೀಸಲಿರಿಸತಕ್ಕದ್ದು ಮತ್ತು ಅವರ ಪೈಕಿಯಿಂದ ನೇರ ನೌಕರಿ ಭರ್ತಿಯ ಮೂಲಕ ನೇಮಕ ಮಾಡಿಕೊಳ್ಳತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 37, ಎಸ್‌ಆರ್‌ಆರ್ 77, ದಿನಾಂಕ 8.2.1979ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 23 ಎಸ್‌ಎಸ್‌ಆರ್ 99 ದಿನಾಂಕ 23.11.1990ರ ರಾಜ್ಯಪತ್ರ ದಿನಾಂಕ 24.11.2000ರ ಮೂಲಕ ಸೇರಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 13, ಎಸ್‌ಆರ್‌ಆರ್ 92, ದಿನಾಂಕ 1.4.1992, ರಾಜ್ಯಪತ್ರ, ದಿನಾಂಕ 1.4.92ರ ಮೂಲಕ ಸೇರಿಸಲಾಗಿದೆ.

4. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28, ಎಸ್‌ಆರ್‌ಆರ್ 95, ದಿನಾಂಕ 21.10.1995, ರಾಜ್ಯಪತ್ರ ದಿನಾಂಕ 2.11.95ರ ಮೂಲಕ ಪ್ರತಿಯೋಜಿಸಲಾಗಿದೆ.

**ವಿವರಣೆ:**– ಈ ಉಪನಿಯಮದ ಉದ್ದೇಶಕ್ಕಾಗಿ ಕುಟುಂಬದ ಸದಸ್ಯರು ಎಂದರೆ ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಸಂಪೂರ್ಣವಾಗಿ ಅವಲಂಬಿಸಿರುವ ಮಕ್ಕಳು ಮತ್ತು ಮಲಮಕ್ಕಳು ಎಂದು ಅರ್ಥ].

[1]["(1ಎ) ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಅಂಥ ನೌಕರಿ ಭರ್ತಿ ನಿಯಮಗಳಲ್ಲಿ ನೇರ ನೌಕರಿ ಭರ್ತಿಯನ್ನು ಒಂದು ವಿಧಾನವನ್ನಾಗಿ ನಿರ್ದಿಷ್ಟಪಡಿಸಿದ್ದರೆ, ಸಾಮಾನ್ಯ ವರ್ಗದ, ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಈ ಮುಂದೆ ಹೇಳಿರುವಷ್ಟು ಶೇಕಡಾ ಪ್ರಮಾಣದ ಹುದ್ದೆಗಳನ್ನು ಆ ವಿಧಾನದ ಮೂಲಕ ತುಂಬುವುದಕ್ಕಾಗಿ ಪ್ರತ್ಯೇಕವಾಗಿ ಮೀಸಲಾಗಿರಿಸತಕ್ಕದ್ದು ಮತ್ತು ದೈಹಿಕ ಅಂಗವಿಕಲ ಅಭ್ಯರ್ಥಿಗಳ ಪೈಕಿಯಿಂದ ನೇರ ನೌಕರಿ ಭರ್ತಿಯ ಮೂಲಕ ತುಂಬತಕ್ಕದ್ದು, ಎಂದರೆ:–

(i) ಸರ್ಕಾರವು ಗುರುತಿಸಬಹುದಾದಂತೆ ಮತ್ತು ಅಧಿಸೂಚಿಸಬಹುದಾದಂತೆ ಎ ಗುಂಪಿನ ಅಥವಾ ಬಿ ಗುಂಪಿನ ಹುದ್ದೆಗಳಲ್ಲಿ ಖಾಲಿ ಸ್ಥಾನಗಳ ಶೇಕಡಾ ಮೂರರಷ್ಟು.

(ii) ಸರ್ಕಾರವು ಗುರುತಿಸಬಹುದಾದಂತೆ ಮತ್ತು ಅಧಿಸೂಚಿಸಬಹುದಾದಂತೆ ಸಿ ಗುಂಪಿನ ಅಥವಾ ಡಿ ಗುಂಪಿನ ಹುದ್ದೆಗಳಲ್ಲಿ ಖಾಲಿ ಸ್ಥಾನಗಳಲ್ಲಿನ ಶೇಕಡಾ ಐದರಷ್ಟು ಹುದ್ದೆಗಳು][1]:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 50 ಎಸ್‌ಎಸ್‌ಆರ್ 2000 ದಿನಾಂಕ 3–9–2005 ರಾಜ್ಯಪತ್ರ ದಿನಾಂಕ 3–9–2005ರ ಮೂಲಕ ಪ್ರತಿಯೋಜಿಸಲಾಗಿದೆ.

ಪರಂತು, ಈ ಉಪನಿಯಮವು,–

(i) [1][ಬಿಟ್ಟುಬಿಡಲಾಗಿದೆ -----][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 50, ಎಸ್‌ಆರ್‌ಆರ್ 2000, ದಿನಾಂಕ 03.09.2005ರ ಮೂಲಕ ಬಿಟ್ಟುಬಿಡಲಾಗಿದೆ.

(ii) ನೌಕರಿ ಭರ್ತಿ ನಿಯಮಗಳಲ್ಲಿ ಯಾವ ಹುದ್ದೆಯ ನೇಮಕಕ್ಕೆ ನಿರ್ದಿಷ್ಟ ದೇಹದಾರ್ಢ್ಯತೆಯನ್ನು ಗೊತ್ತುಪಡಿಸಲಾಗಿದೆಯೋ ಆ ಯಾವುದೇ ಹುದ್ದೆಗೆ;

(iii) ಮೋಟಾರು ವಾಹನಗಳ ಚಾಲಕರ ಹುದ್ದೆಗೆ; ಮತ್ತು

(iv) ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಅಂಥ ಇತರ ಹುದ್ದೆಗಳಿಗೆ][2]

– ನೇರ ನೌಕರಿ ಭರ್ತಿಗೆ ಅನ್ವಯಿಸತಕ್ಕದ್ದಲ್ಲ.

[1][ಪರಂತು, ಈ ಉಪನಿಯಮವು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ವರೂಪದ ದೈಹಿಕ ಅಂಗವಿಕಲತೆಯಿಂದ ಬಳಲುತ್ತಿರುವ ವ್ಯಕ್ತಿಗಳ ನೇರ ನೌಕರಿ ಭರ್ತಿಗೆ ಮತ್ತು ಅಂಥ ಹುದ್ದೆಗಳಿಗೆ ಸಂಬಂಧಿಸಿದಂತೆ ಸಹ ಅನ್ವಯಿಸತಕ್ಕದ್ದಲ್ಲ][1].

[2]["(1ಎಎ). ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧವಾಗಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಅಂಥ ನೌಕರಿ ಭರ್ತಿ ನಿಯಮಗಳಲ್ಲಿ ನೇರ ನೌಕರಿ ಭರ್ತಿಯನ್ನು ಒಂದು ನೌಕರಿ ಭರ್ತಿ ವಿಧಾನವನ್ನಾಗಿ ನಿರ್ದಿಷ್ಟಪಡಿಸಿದ್ದರೆ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) (ಐವತ್ತೇಳನೇ ತಿದ್ದುಪಡಿ) ನಿಯಮಗಳು, 2000 ಪ್ರಾರಂಭವಾದ ದಿನಾಂಕದಿಂದ ಇಪ್ಪತ್ತು ವರ್ಷಗಳ ಅವಧಿಯವರೆಗೆ, ಆ ವಿಧಾನಕ್ಕಾಗಿ ಸಾಮಾನ್ಯವರ್ಗದ, ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ ಪ್ರತಿಯೊಂದು ಪ್ರವರ್ಗದಲ್ಲಿ ಮತ್ತು ಇತರ ಹಿಂದುಳಿದ

ವರ್ಗಗಳ ಪ್ರತಿಯೊಂದು ಪ್ರವರ್ಗದಲ್ಲಿ ಶೇಕಡಾ ಐದರಷ್ಟು ಹುದ್ದೆಗಳನ್ನು ನಿಗದಿಮಾಡಿ ಅವುಗಳನ್ನು ಯೋಜನಾ ನಿರಾಶ್ರಿತರ ಕುಟುಂಬಗಳಿಗೆ ಸೇರಿದ ಸದಸ್ಯರ ಪೈಕಿಯಿಂದ ನೇರ ನೌಕರಿಭರ್ತಿ ಮೂಲಕ ತುಂಬಿಕೊಳ್ಳತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 64 ಎಸ್‌ಎಸ್‌ಆರ್ 79 ದಿನಾಂಕ 27ನೇ ಆಗಸ್ಟ್ 1981 ರಾಜ್ಯಪತ್ರ ದಿನಾಂಕ 10–9–1981ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 23 ಎಸ್‌ಎಸ್‌ಆರ್ 99 ದಿನಾಂಕ 23–11–2000 ರಾಜ್ಯಪತ್ರ ದಿನಾಂಕ 24–11–2000 ಮೂಲಕ ಸೇರಿಸಲಾಗಿದೆ.

ಪರಂತು, ಈ ಉಪನಿಯಮವು ಎ ಗುಂಪಿಗೆ ಮತ್ತು ಬಿ ಗುಂಪಿನ ಹುದ್ದೆಗಳಿಗೆ ಮಾಡುವ ನೇರ ನೌಕರಿ ಭರ್ತಿಗೆ ಅನ್ವಯಿಸತಕ್ಕದ್ದಲ್ಲ:

ಮತ್ತೂ ಪರಂತು, ಯೋಜನಾ ನಿರಾಶ್ರಿತರಿಗೆ ಸೇರಿದ ಗ್ರಾಮ ಠಾಣದಲ್ಲಿರುವ ಯಾವುದೇ ಭೂಮಿ ಅಥವಾ ನಿವೇಶನ ಅಥವಾ ಯಾವುದೇ ಆಸ್ತಿಯನ್ನು ಆರ್ಜಿಸಿಕೊಂಡ ಕಾರಣದಿಂದಾಗಿ, ಅದರ ಸ್ವಾಧೀನತೆಯನ್ನು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೌಕರಿ ಭರ್ತಿ) (ಐವತ್ತೇಳನೇ ತಿದ್ದುಪಡಿ) ನಿಯಮಗಳು, 2000 ಪ್ರಾರಂಭವಾಗುವುದಕ್ಕಿಂತ ಇಪ್ಪತ್ತು ವರ್ಷಗಳಷ್ಟು ಮೊದಲು ತೆಗೆದುಕೊಂಡಿದ್ದರೆ ಅಂಥ ಯೋಜನಾ ನಿರಾಶ್ರಿತರ ಕುಟುಂಬದ ಸದಸ್ಯರು ಈ ಉಪನಿಯಮದ ಅಡಿಯಲ್ಲಿ ನೌಕರಿ ಭರ್ತಿಗೆ ಅರ್ಹರಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಎಲ್ಲ ವಿಷಯಗಳು ಸಮಾನವಾಗಿರುವಾಗ ಈ ಉಪ ನಿಯಮದ ಅಡಿಯಲ್ಲಿನ ನೇರ ನೌಕರಿ ಭರ್ತಿಯನ್ನು ಈ ಮುಂದಿನ ಆದ್ಯತಾ ಕ್ರಮದಲ್ಲಿ ಮಾಡತಕ್ಕದ್ದು, ಎಂದರೆ:–

(i) ವಾಸದ ಮನೆ ಮತ್ತು ಆತನು ಅವಲಂಬಿಸಿದ ಆತನ ಕೃಷಿಭೂಮಿಯ ಕನಿಷ್ಠ ಶೇಕಡಾ ಐವತ್ತರಷ್ಟನ್ನು ಯೋಜನೆಗಾಗಿ ಕಳೆದುಕೊಂಡಿರುವ ಯೊಜನಾ ನಿರಾಶ್ರಿತ ವ್ಯಕ್ತಿಯ ಕುಟುಂಬದ ಸದಸ್ಯರು;

(ii) ಯೋಜನಾ ಪೂರ್ವಾವಧಿಯಲ್ಲಿ ಭೂರಹಿತನಾಗಿದ್ದು ಆದರೆ ಯೋಜನೆಯ ಸಲುವಾಗಿ ತನ್ನ ವಾಸದ ಮನೆಯನ್ನು ಕಳೆದುಕೊಂಡಿರುವ ಯೋಜನಾ ನಿರಾಶ್ರಿತ ವ್ಯಕ್ತಿಯ ಕುಟುಂಬದ ಸದಸ್ಯರು;

(iii) ಯಾವ ಕೃಷಿ ಭೂಮಿಯ ಮೇಲೆ ಅವನು ಅವಲಂಬಿತನಾಗಿದ್ದನೋ ಆ ಕೃಷಿ ಭೂಮಿಯ ಕೇವಲ ಶೇಕಡಾ ಐವತ್ತು ಅಥವಾ ಅದಕ್ಕಿಂತ ಕಡಿಮೆ ಭೂಮಿಯನ್ನು ಕಳೆದುಕೊಂಡ ಯೋಜನಾ ನಿರಾಶ್ರಿತ ವ್ಯಕ್ತಿಯ ಕುಟುಂಬದ ಸದಸ್ಯರು;

(iv) ಯಾವುದೇ ಇತರ ಪ್ರಕರಣದಲ್ಲಿ ಯೋಜನಾ ನಿರಾಶ್ರಿತ ವ್ಯಕ್ತಿಯ ಕುಟುಂಬದ ಸದಸ್ಯರು;

**ವಿವರಣೆ:**– ಈ ಉಪನಿಯಮದ ಉದ್ದೇಶಕ್ಕಾಗಿ,–

(i) "ಯೋಜನಾ ನಿರಾಶ್ರಿತ ವ್ಯಕ್ತಿ" ಎಂದರೆ, ಅಂಥ ಭೂಮಿಯನ್ನು ಅಥವಾ ಸ್ವತ್ತನ್ನು ಆರ್ಜಿಸುವಂಥ ಪ್ರಾರಂಭಿಕ ಅಧಿಸೂಚನೆ ಪ್ರಕಟಣೆಯ ದಿನಾಂಕಕ್ಕೆ ಮುಂಚೆ ಕನಿಷ್ಠ ಐದು ವರ್ಷಗಳ ಅವಧಿಯವರೆಗೆ ಭೂಮಿ ಅಥವಾ ಇತರ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದ ಯಾರೇ ಹಿಡುವಳಿದಾರ, ಗೇಣಿದಾರ, ಸರ್ಕಾರದ ಇತರ ಸ್ವತ್ತಿನ ಗುತ್ತಿಗೆದಾರ ಅಥವಾ ಮಾಲೀಕ ಮತ್ತು ಯೋಜನೆಯಡಿಯಲ್ಲಿ ತೊಂದರೆಗೊಳಗಾದ ಪ್ರದೇಶದಲ್ಲಿರುವ ಗ್ರಾಮಠಾಣದಲ್ಲಿರುವ ನಿವೇಶನ ಅಥವಾ ಇತರ ಸ್ವತ್ತು ಸೇರಿದಂತೆ ಆತನ ಭೂಮಿಯನ್ನು ಆರ್ಜಿಸಿಕೊಂಡಿರುವುದರಿಂದ, ಆ ಯೋಜನೆಯ ಉದ್ದೇಶಕ್ಕಾಗಿ ಅಂಥ ಭೂಮಿ ಅಥವಾ ಇತರ ಆಸ್ತಿಯಿಂದ ನಿರಾಶ್ರಿತನಾದ ವ್ಯಕ್ತಿ ಎಂದು ಅರ್ಥ.

(ii) ಯೋಜನಾ ಸ್ಥಳಾಂತರಿತ ವ್ಯಕ್ತಿಯ ಸಂಬಂಧದಲ್ಲಿ "ಕುಟುಂಬದ ಸದಸ್ಯರು" ಎಂದರೆ, ಅಂಥ ವ್ಯಕ್ತಿಗಳು ಮತ್ತು ಆತನ ಅಥವಾ ಆಕೆಯ ಹೆಂಡತಿ ಅಥವಾ ಗಂಡ, ಮಕ್ಕಳು, ಅವಿವಾಹಿತ ಹೆಣ್ಣು ಮಕ್ಕಳು, ಆತನೊಂದಿಗೆ ವಾಸಿಸುತ್ತಿರುವ ಮತ್ತು ಜೀವನೋಪಾಯಕ್ಕಾಗಿ ಆತನನ್ನು ಅವಲಂಬಿಸಿರುವ ಸಹೋದರರು ಮತ್ತು ಸಹೋದರಿಯರು ಎಂದು ಅರ್ಥ];

"ಯೋಜನೆ" ಎಂದರೆ, ನೀರಾವರಿಯ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡುವುದಕ್ಕಾಗಿ ಅಥವಾ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಸರಬರಾಜಿಗಾಗಿ ಅಥವಾ ವಿದ್ಯುಚ್ಛಕ್ತಿಯ ಅಭಿವೃದ್ಧಿಗೆ ನೆರವಾಗುವ ನಿರ್ಮಾಣದ, ವಿಸ್ತರಣೆಯ ಅಥವಾ ಸುಧಾರಣೆಯ ಯಾವುದೇ ಕಾಮಗಾರಿ ಎಂದು ಅರ್ಥ ಮತ್ತು ಅಂಥ ಕಾಮಗಾರಿಗೆ ಬಳಸಬಹುದಾದ ಭೂಮಿಗಳಿಂದ ವ್ಯಕ್ತಿಗಳನ್ನು ಸ್ಥಳಾಂತರಗೊಳಿಸುವುದಕ್ಕೆ ಕಾರಣವಾಗುವ ಜನೋಪಯೋಗಿ ನಿರ್ಮಾಣದ, ವಿಸ್ತರಣೆಯ, ಸುಧಾರಣೆಯ ಅಥವಾ ಅಭಿವೃದ್ಧಿಯ ಯಾವುದೇ ಇತರ ಕಾಮಗಾರಿಯನ್ನು ಒಳಗೊಳ್ಳುತ್ತದೆ.

[1][(ಬಿ) ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಆ ವಿಧಾನಕ್ಕಾಗಿ ನಿಗದಿಪಡಿಸಿದ ಖಾಲಿಸ್ಥಾನಗಳು ಶೇಕಡಾ ಮುವ್ವತ್ತರಷ್ಟು ಹುದ್ದೆಗಳಿಗೆ ಮಾಡುವ ಎಲ್ಲ ನೇರ ನೌಕರಿ ಭರ್ತಿಗಳಲ್ಲಿ, ನೇಮಕದ ರೀತಿಯ

ಬಗ್ಗೆ ಸರ್ಕಾರವು ಹೊರಡಿಸಬಹುದಾದ ಯಾವುವೇ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು ಮಹಿಳಾ ಅಭ್ಯರ್ಥಿಗಳ ಪೈಕಿಯಿಂದ ಭರ್ತಿ ಮಾಡತಕ್ಕದ್ದು:

ಪರಂತು, ಶೇಕಡಾ ಮುವ್ವತ್ತರಷ್ಟು ಪ್ರಮಾಣದಲ್ಲಿ ಸಾಕಷ್ಟು ಸಂಖ್ಯೆಯ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ, ಭರ್ತಿಯಾಗದೆ ಉಳಿದಿರುವ ಖಾಲಿಸ್ಥಾನಗಳನ್ನು ಅದೇ ಪ್ರವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು:

ಮತ್ತೂ ಪರಂತು, ಮಹಿಳಾ ಅಭ್ಯರ್ಥಿಗಳು ನೇರ ನೌಕರಿ ಭರ್ತಿಯ ಶೇಕಡಾ ಎಪ್ಪತ್ತರಷ್ಟು ಹುದ್ದೆಗಳಿಗೆ ಸ್ಪರ್ಧಿಸುವುದನ್ನು ಮತ್ತು ಅರ್ಹತೆ ಆಧಾರದ ಮೇಲೆ ಆಯ್ಕೆಯಾದರೆ ಆ ಹುದ್ದೆಗಳಿಗೆ ಅವರನ್ನು ಪರಿಗಣಿಸುವುದನ್ನು ಈ ನಿಯಮದಲ್ಲಿರುವುದು ಯಾವುದೂ ಪ್ರತಿಬಂಧಿಸತಕ್ಕದ್ದಲ್ಲ]:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 34 ಎಸ್‌ಎಸ್‌ಆರ್ 95, ದಿನಾಂಕ 6ನೇ ಮಾರ್ಚ್ 1996 ರಾಜ್ಯಪತ್ರ ದಿನಾಂಕ 6-3-96ರ ಮೂಲಕ ಸೇರಿಸಲಾಗಿದೆ.

[1]["ಮತ್ತೂ ಪರಂತು, ಸರ್ಕಾರವು ಅಧಿಸೂಚನೆಯ ಮೂಲಕ ಈ ಉಪನಿಯಮದ ಉಪಬಂಧದ ಅನ್ವಯದಿಂದ ಯಾವುದೇ ಸೇವೆಯನ್ನು ಅಥವಾ ಹುದ್ದೆಯನ್ನು ಹೊರತುಪಡಿಸಬಹುದು"][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್‌ಎಸ್‌ಆರ್ 98, ದಿನಾಂಕ 7-12-1999 ರಾಜ್ಯಪತ್ರ ದಿನಾಂಕ 7-12-1999ರ ಮೂಲಕ ಸೇರಿಸಲಾಗಿದೆ.

[1]["(1ಸಿ) ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸಾಮಾನ್ಯ ವರ್ಗದ, ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳಲ್ಲಿನ ಪ್ರತಿಯೊಂದು ಪ್ರವರ್ಗಗಳಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಆ ವಿಧಾನಕ್ಕಾಗಿ ನಿಗದಿಪಡಿಸಿದ ಖಾಲಿಸ್ಥಾನಗಳ ಶೇಕಡಾ ಐದರಷ್ಟು ಹುದ್ದೆಗಳಿಗೆ ಮಾಡುವ ಎಲ್ಲ ನೇರ ನೌಕರಿ ಭರ್ತಿಗಳಲ್ಲಿ, ನೇಮಕದ ರೀತಿಯ ಬಗ್ಗೆ ಸರ್ಕಾರವು ಹೊರಡಿಸಬಹುದಾದ ಯಾವುದೇ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು, ಹುದ್ದೆಗೆ ಗೊತ್ತುಪಡಿಸಲಾದ ಅರ್ಹತಾ ಪರೀಕ್ಷೆಯು ಎಸ್‌ಎಸ್‌ಎಲ್‌ಸಿ ಅಥವಾ ಹೆಚ್ಚಿನದಾಗಿರುವಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಅಥವಾ ಆ ಹುದ್ದೆಗೆ ಗೊತ್ತುಪಡಿಸಲಾದ ಅರ್ಹತಾ ಪರೀಕ್ಷೆಯು ಎಸ್‌ಎಸ್‌ಎಲ್‌ಸಿಗಿಂತ ಕೆಳಮಟ್ಟದ್ದಾಗಿರುವಲ್ಲಿ ಒಂದನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ ಅಭ್ಯರ್ಥಿಗಳ ಪೈಕಿಯಿಂದ ಭರ್ತಿ ಮಾಡತಕ್ಕದ್ದು"][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 71 ಎಸ್‌ಎಸ್‌ಆರ್ 2001, ದಿನಾಂಕ 4-10-2002 ರಾಜ್ಯಪತ್ರ ದಿನಾಂಕ 28-10-2002ರ ಮೂಲಕ ಸೇರಿಸಲಾಗಿದೆ.

(2) (1)ನೇ ಉಪನಿಯಮದಲ್ಲಿ ಮತ್ತು (1ಎ) ಉಪನಿಯಮದಲ್ಲಿ ನಮೂದಿಸಿದ ಪ್ರವರ್ಗಗಳಿಗೆ ಸೇರಿದ ಸೂಕ್ತ ವ್ಯಕ್ತಿಗಳು ಸಾಕಷ್ಟು ಸಂಖ್ಯೆಯಲ್ಲಿ ಅವರಿಗಾಗಿ ಅಂಥ ಖಾಲಿಸ್ಥಾನಗಳನ್ನು ನಿಗದಿಪಡಿಸಿದ ಹುದ್ದೆಗಳನ್ನು ತುಂಬುವುದಕ್ಕಾಗಿ ಲಭ್ಯವಾಗದಿದ್ದರೆ, ಅವುಗಳನ್ನು ನೇರ ನೌಕರಿಭರ್ತಿಯ ಮೂಲಕ ತುಂಬತಕ್ಕದ್ದು.

(3) [1][ಬಿಟ್ಟುಬಿಡಲಾಗಿದೆ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಎಸ್‌ಆರ್ 95, ರಾಜ್ಯಪತ್ರ ದಿನಾಂಕ 21ನೇ ಅಕ್ಟೋಬರ್ 1995 ದಿನಾಂಕ 2-11-1995ರ ಮೂಲಕ ಬಿಟ್ಟುಬಿಡಲಾಗಿದೆ.

**10. ಸೂಕ್ತತೆಯ ಮತ್ತು ನಡತೆಯ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಷರತ್ತುಗಳು.–** ವ್ಯಕ್ತಿಯು ಸಚ್ಚಾರಿತ್ರ್ಯವುಳ್ಳವನಾಗಿದ್ದಾನೆಂದು ಮತ್ತು ಸರ್ಕಾರಿ ಸೇವೆಗೆ ನೇಮಕಗೊಳ್ಳಲು ಎಲ್ಲ ವಿಧದಿಂದಲೂ ಸೂಕ್ತನಾಗಿದ್ದಾನೆಂದು ನೇಮಕಾತಿ ಪ್ರಾಧಿಕಾರಕ್ಕೆ ಮನವರಿಕೆಯಾದ ಹೊರತು ಯಾರೇ ವ್ಯಕ್ತಿಯನ್ನು ಯಾವುದೇ ಸೇವೆ ಅಥವಾ ಹುದ್ದೆಗೆ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ನೇರ ನೌಕರಿ ಭರ್ತಿಗೆ ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಯು ಕೊನೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶಿಕ್ಷಣ ಸಂಸ್ಥೆಯಿಂದ ಒದಗಿಸಲು ಅಗತ್ಯಪಡಿಸಬಹುದಾದಂಥ ಪ್ರಮಾಣ ಪತ್ರ ಅಥವಾ ಪ್ರಮಾಣಪತ್ರಗಳ ಜೊತೆಗೆ ಅವನ ಆಯ್ಕೆಯ ದಿನಾಂಕಕ್ಕಿಂತ ಮುಂಚೆ ಆರು ತಿಂಗಳುಗಳಿಗಿಂತ ಹೆಚ್ಚಿನದಲ್ಲದ, ಅವನು ಅಭ್ಯಾಸ ಮಾಡಿದ ಮಹಾವಿದ್ಯಾಲಯ ಅಥವಾ ವಿಶ್ವವಿದ್ಯಾಲಯಕ್ಕೆ ಸಂಬಂಧಪಡದಿರುವ ಮತ್ತು ಅವನ ನಡತೆಯನ್ನು ದೃಢೀಕರಿಸುವ ಅವನ ಸಂಬಂಧಿಗಳಲ್ಲದ ಇಬ್ಬರು ಗಣ್ಯವ್ಯಕ್ತಿಗಳು ಅವನ ನಡತೆಯ ಬಗ್ಗೆ ಕೊಟ್ಟಿರುವ ಪ್ರಮಾಣಪತ್ರಗಳನ್ನು ನೇಮಕ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು. ಸರ್ಕಾರಿ ಸೇವೆಗೆ ನೇಮಕಗೊಳ್ಳುವುದಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಯ ಸೂಕ್ತತೆಯ ಕುರಿತಂತೆ ಯಾವುದೇ ಸಂದೇಹ ಉಂಟಾದ ಪಕ್ಷದಲ್ಲಿ ಆ ಸಂಬಂಧವಾಗಿ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**11. ಸರ್ಕಾರಿ ನೌಕರರು ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ.–** ಯಾವುದೇ ಸೇವೆ ಅಥವಾ ಹುದ್ದೆಗೆ ನೌಕರಿ ಭರ್ತಿಗಾಗಿ ಅರ್ಜಿ ಸಲ್ಲಿಸುವ ಸರ್ಕಾರಿ ನೌಕರನು ತನ್ನ ಅರ್ಜಿಯನ್ನು ಆತ ಅರ್ಜಿ ಸಲ್ಲಿಸುತ್ತಿರುವಾಗ ಹೊಂದಿರುವ ಹುದ್ದೆಗೆ ಆತನನ್ನು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರಿಯ ಮೂಲಕ ಸಲ್ಲಿಸತಕ್ಕದ್ದು. ಸರ್ಕಾರಿ ನೌಕರನಿಗೆ ಅರ್ಜಿ ಸಲ್ಲಿಸಲು ಅನುಮತಿಸಬೇಕೇ ಬೇಡವೇ ಎಂಬುದನ್ನು ಅಂಥ ಪ್ರಾಧಿಕಾರಿಯೇ ನಿರ್ಧರಿಸತಕ್ಕದ್ದು ಮತ್ತು ಅಂಥ ಅನುಮತಿ ನೀಡುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧೆ ಉಂಟುಮಾಡುವುದಿಲ್ಲ ಅಥವಾ ಅರ್ಜಿದಾರ ಸರ್ಕಾರದೊಂದಿಗೆ ಮಾಡಿಕೊಂಡಿರುವ ಯಾವುದೇ ನಿರ್ದಿಷ್ಟ ಒಪ್ಪಂದಕ್ಕೆ ಅಸಂಗತವಾಗಿಲ್ಲವೆಂದು ಪ್ರಾಧಿಕಾರಿಯು ಪರಿಗಣಿಸಿದ ಹೊರತು ಸಾಮಾನ್ಯವಾಗಿ ಅಂಥ ಅನುಮತಿಯನ್ನು ನೀಡತಕ್ಕದ್ದು:

[1][ಪರಂತು, ಸರ್ಕಾರಿ ನೌಕರನು ಸರ್ಕಾರದ ಯಾವುದೇ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಯೆಂದು ನಿಯೋಜಿತನಾಗಿರುವಾಗ ಅವನನ್ನು ಎಲ್ಲಿಯವರೆಗೆ ಹಾಗೆ ಪರಿಗಣಿಸಲಾಗುವುದೋ ಅಲ್ಲಿಯವರೆಗೆ ಈ ಉಪನಿಯಮ ಅವನಿಗೆ ಅನ್ವಯಿಸತಕ್ಕದ್ದಲ್ಲ.][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 38 ಎಸ್‌ಎಸ್‌ಆರ್ 79, ದಿನಾಂಕ 21ನೇ ಜುಲೈ 1981 ದಿನಾಂಕ 31ನೇ ಜುಲೈ 1981ರ ಮೂಲಕ ಪ್ರತ್ಯಾಯೋಜಿಸಲಾಗಿದೆ ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಆರ್ 85, ದಿನಾಂಕ 31ನೇ ಜುಲೈ 1985, ದಿನಾಂಕ 31.07.1985ರ ಮೂಲಕ ಮತ್ತೊಮ್ಮೆ ಪ್ರತಿಯೋಜಿಸಲಾಗಿದೆ.

**12. ದೇಹದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು.–** [1][(1) 4ನೇ ನಿಯಮದ (1)ನೇ ಖಂಡದ ಉಪಬಂಧಗಳ ಅನುಸಾರ ನೌಕರಿ ಭರ್ತಿಗಾಗಿ ಆಯ್ಕೆ ಮಾಡಲಾದ ಯಾರೇ ಅಭ್ಯರ್ಥಿಯನ್ನು, ಆತನಿಗೆ ನಿರ್ವಹಿಸುವಂತೆ ಹೇಳಬಹುದಾದ ಕರ್ತವ್ಯಗಳನ್ನು ನಿರ್ವಹಿಸಲು ದೈಹಿಕವಾಗಿ ತಾನು ಅರ್ಹನಾಗಿರುತ್ತೇನೆಂದು ನೇಮಕ ಪ್ರಾಧಿಕಾರಕ್ಕೆ ಆತನು ಮನವರಿಕೆ ಮಾಡಿ ಕೊಟ್ಟ ಹೊರತು, ಆತನನ್ನು ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ. ಸರ್ಕಾರವು ಆದೇಶದ ಮೂಲಕ ಯಾವುದೇ ಸೇವೆ ಅಥವಾ ಹುದ್ದೆಗೆ ನೇಮಕ ಮಾಡುವುದಕ್ಕಾಗಿ ವ್ಯಕ್ತಿಯು ಪೂರೈಸಬೇಕಿರುವ ದೇಹದಾರ್ಢ್ಯತೆ ಮಾನದಂಡವನ್ನು ನಿರ್ದಿಷ್ಟಪಡಿಸಬಹುದು ಮತ್ತು ದೇಹದಾರ್ಢ್ಯತೆ ಪ್ರಮಾಣಪತ್ರವನ್ನು ನೀಡಬಹುದಾದಂಥ ವೈದ್ಯಕೀಯ ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಬಹುದು ಮತ್ತು ಅವಶ್ಯವೆನಿಸಬಹುದಾದ ಅಂಥ ಇತರ ಪ್ರಾಸಂಗಿಕ ವಿಷಯಗಳ ಬಗ್ಗೆ ಉಪಬಂಧಿಸಬಹುದು. ಅಭ್ಯರ್ಥಿಯ ದೇಹದಾರ್ಢ್ಯತೆಗೆ ಸಂಬಂಧಿಸಿದಂತೆ ಅಥವಾ ಅನ್ಯಥಾ ವೈದ್ಯಕೀಯ ಪ್ರಾಧಿಕಾರದ ಅಭಿಪ್ರಾಯವು ಅಭ್ಯರ್ಥಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 35 ಎಸ್‌ಎಸ್‌ಆರ್ 77(1), ದಿನಾಂಕ 8ನೇ ಫೆಬ್ರವರಿ 1978 ರಾಜ್ಯಪತ್ರ ದಿನಾಂಕ 23ನೇ ಫೆಬ್ರವರಿ 1978ರ ಮೂಲಕ ಪ್ರತಿಯೋಜಿಸಲಾಗಿದೆ.

[1][(1ಎ) ನೇಮಕಕ್ಕೆ ಆಯ್ಕೆಯಾದ ಅಭ್ಯರ್ಥಿಯು, (1)ನೇ ಉಪನಿಯಮದ ಅಡಿಯಲ್ಲಿ ಸರ್ಕಾರವು ನಿಗದಿಪಡಿಸಿರುವ ವೈದ್ಯಕೀಯ ಪ್ರಾಧಿಕಾರದ ಮುಂದೆ ಹಾಜರಾಗಲು ತಪ್ಪಿದರೆ, ಅಂಥ ಪ್ರಾಧಿಕಾರದ ಮುಂದೆ ಹಾಜರಾಗಲು ಮತ್ತೊಂದು ಅವಕಾಶವನ್ನು ನೀಡತಕ್ಕದ್ದು. ಆ ಎರಡನೇ ಸಂದರ್ಭದಲ್ಲೂ ಕೂಡ ಅಭ್ಯರ್ಥಿಯು ವೈದ್ಯಕೀಯ ಪ್ರಾಧಿಕಾರದ ಮುಂದೆ ಹಾಜರಾಗಲು ತಪ್ಪಿದರೆ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯಿಂದ ಆತನ ಹೆಸರನ್ನು ತೆಗೆದುಹಾಕತಕ್ಕದ್ದು ಮತ್ತು ಆತನು ನೇಮಕಕ್ಕೆ ಅರ್ಹನಾಗಿರುವುದು ನಿಂತುಹೋಗತಕ್ಕದ್ದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಎಸ್‌ಆರ್ 83, ದಿನಾಂಕ 10ನೇ ಮೇ 1984 ರಾಜ್ಯಪತ್ರ ದಿನಾಂಕ 14–6–84ರ ಮೂಲಕ ಸೇರಿಸಲಾಗಿದೆ.

[1][(2) ಸರ್ಕಾರ ಯಾವುದೇ ಪ್ರಕರಣದಲ್ಲಿ ಸರಿಯಾದ ಮತ್ತು ಸಮರ್ಪಕವಾದ ಕಾರಣಗಳಿಗಾಗಿ (1)ನೇ ಉಪನಿಯಮದ ಅಡಿಯಲ್ಲಿ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದರಿಂದ ವಿನಾಯತಿ ನೀಡಬಹುದು][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 35 ಎಸ್‌ಎಸ್‌ಆರ್ 77(1), ದಿನಾಂಕ 8ನೇ ಫೆಬ್ರವರಿ 1978 ರಾಜ್ಯಪತ್ರ ದಿನಾಂಕ 23ನೇ ಫೆಬ್ರವರಿ 1978ರ ಮೂಲಕ ಪ್ರತಿಯೋಜಿಸಲಾಗಿದೆ.

(3) ನೇಮಕ ಪ್ರಾಧಿಕಾರವು, ಮೂರು ತಿಂಗಳುಗಳಿಗಿಂತ ಕಡಿಮೆಯಿರುವ ಅಲ್ಪಾವಧಿಯ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಲಾಗುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ (1)ನೇ ಉಪನಿಯಮದ ಅಡಿಯಲ್ಲಿ ಪ್ರಮಾಣಪತ್ರವನ್ನು ಹಾಜರುಪಡಿಸುವುದರಿಂದ ವಿನಾಯತಿ ನೀಡಬಹುದು.

**13. ಶುಲ್ಕಗಳು.–** ಯಾವುದೇ ಸೇವೆ ಅಥವಾ ಹುದ್ದೆಗೆ ನೇರ ನೌಕರಿ ಭರ್ತಿಗೆ ಪ್ರತಿಯೊಬ್ಬ ಅಭ್ಯರ್ಥಿಯನ್ನು,–

[1][(i) ಆತನ ಅರ್ಜಿ ಮತ್ತು ಪರೀಕ್ಷೆಗೆ ಸಂಬಂಧಿಸಿದಂತೆ ಆಯೋಗವು;

(iಎ) ಆತನ ಅರ್ಜಿ ಮತ್ತು ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದ ಒಪ್ಪಿಗೆಯೊಂದಿಗೆ ನೇರ ನೌಕರಿ ಭರ್ತಿ ಮಾಡುವ ಯಾವುದೇ ಇತರ ಪ್ರಾಧಿಕಾರವು ಮತ್ತು;][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 29 ಎಸ್‌ಎಸ್‌ಆರ್ 97, ದಿನಾಂಕ 8.4.2002ರ ಮೂಲಕ ಪ್ರತಿಯೋಜಿಸಲಾಗಿದೆ.

(ii) ಆತನ ವೈದ್ಯಕೀಯ ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರವು

– ಗೊತ್ತುಪಡಿಸಬಹುದಾದ ಶುಲ್ಕ ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು:

ಪರಂತು, [1][ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ][1] ಅಥವಾ [2][ಪ್ರವರ್ಗ–I][2] ಕ್ಕೆ ಸೇರಿರುವ ಅಭ್ಯರ್ಥಿಗೆ ಈ ನಿಯಮದ ಅಡಿಯಲ್ಲಿ ಗೊತ್ತುಪಡಿಸಿದ ಯಾವುವೇ ಶುಲ್ಕಗಳನ್ನು ಸಂದಾಯ ಮಾಡುವುದರಿಂದ ವಿನಾಯತಿ ನೀಡತಕ್ಕದ್ದು ಮತ್ತು ಅಭ್ಯರ್ಥಿಯು ಒಬ್ಬ ಅಕ್ಕಸಾಲಿಗನಾಗಿದ್ದು ಆತ ಸಾಮಾನ್ಯವಾಗಿ ವಾಸಿಸುತ್ತಿದ್ದ ತಾಲ್ಲೂಕಿನ ತಹಶೀಲ್ದಾರರು ಚಿನ್ನ ನಿಯಂತ್ರಣ ಆದೇಶ, 1962ರ ಪರಿಣಾಮವಾಗಿ ಆತ ತನ್ನ ವ್ಯವಹಾರವನ್ನು ಕಳೆದುಕೊಂಡಿದ್ದಾನೆಂದು ಪ್ರಮಾಣೀಕರಿಸಿದರೆ ಅಥವಾ ಅಂಥ ಅಕ್ಕಸಾಲಿಗ ಕುಟುಂಬದ ಸದಸ್ಯನಾಗಿರುತ್ತಾನೆಂದು ಅಂಥ ತಹಶೀಲ್ದಾರನು ಪ್ರಮಾಣೀಕರಿಸಿದರೆ, ಸಂದಾಯ ಮಾಡಬೇಕಾದ ಶುಲ್ಕವು ಈ ನಿಯಮದ ಅಡಿಯಲ್ಲಿ ಗೊತ್ತುಪಡಿಸಿದ ಶುಲ್ಕಗಳ ನಾಲ್ಕನೇ ಒಂದರಷ್ಟು ಆಗಿರತಕ್ಕದ್ದು.

[3][ಮತ್ತೂ ಪರಂತು, ಪೂರ್ವ ಪಾಕಿಸ್ತಾನ (ಈಗಿನ ಬಾಂಗ್ಲಾದೇಶ), ಬರ್ಮ ಮತ್ತು ಶ್ರೀಲಂಕಾದಿಂದ ವಲಸೆ ಬಂದ ಭಾರತೀಯ ಸಂಜಾತ ವ್ಯಕ್ತಿಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ಜಾಹೀರಾತು ನೀಡಿರುವ ಹುದ್ದೆಗೆ ಅಥವಾ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳುವುದಕ್ಕಾಗಿ ಅರ್ಜಿಯ ಸಂಬಂಧದಲ್ಲಿ ನಿರ್ದಿಷ್ಟಪಡಿಸಿರುವ ಶುಲ್ಕವನ್ನು ಸಂದಾಯ ಮಾಡುವುದರಿಂದ ವಿನಾಯತಿ ನೀಡತಕ್ಕದ್ದು][3].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಆರ್ 84, ದಿನಾಂಕ 4ನೇ ಏಪ್ರಿಲ್ 1986, ರಾಜ್ಯಪತ್ರ ದಿನಾಂಕ 17ನೇ ಏಪ್ರಿಲ್ 1986ರ ಮೂಲಕ ಪ್ರತಿಯೋಜಿಸಲಾಗಿದೆ. ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಎಸ್‌ಆರ್ 86, ದಿನಾಂಕ 12ನೇ ಡಿಸೆಂಬರ್ 1986 ರಾಜಪತ್ರ ದಿನಾಂಕ 12ನೇ ಡಿಸೆಂಬರ್ 1986 ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಎಸ್‌ಆರ್ 86, 12ನೇ ಡಿಸೆಂಬರ್ 1986 ರಾಜಪತ್ರ ದಿನಾಂಕ 12ನೇ ಡಿಸೆಂಬರ್ 1986 ರ ಮೂಲಕ ಪ್ರತಿಯೋಜಿಸಲಾಗಿದೆ ಮತ್ತು ಮತ್ತೊಮ್ಮೆ ಅಧಿಸೂಚನೆ ಸಂಖ್ಯೆ ಡಿಪಿಎಆರ್ 04, ಎಸ್‌ಆರ್‌ಆರ್ 95, ದಿನಾಂಕ 25ನೇ ಜುಲೈ 1995 ದಿನಾಂಕ 10–8–95ರ ಮೂಲಕ ಪ್ರತಿಯೋಜಿಸಲಾಗಿದೆ

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 25 ಎಸ್‌ಎಸ್‌ಶರ್ 80, ದಿನಾಂಕ 20ನೇ ಮೇ 1982 ರಾಜ್ಯಪತ್ರ ದಿನಾಂಕ 1ನೇ ಜುಲೈ 1982ರ ಮೂಲಕ ಸೇರಿಸಲಾಗಿದೆ.

**14. ಕೆಲವು ತಾತ್ಕಾಲಿಕ ಹುದ್ದೆಗಳಿಗೆ ನೌಕರಿಭರ್ತಿ ವಿಧಾನ ಮತ್ತು ಅರ್ಹತೆ.–** ಯಾವುದೇ ರಾಜ್ಯ ಸಿವಿಲ್ ಸೇವಾ ಕೇಡರ್‌ನಲ್ಲಿ ಸೇರಿರದ ಅಥವಾ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿದ ನೌಕರಿಭರ್ತಿ ನಿಯಮಗಳು ಅನ್ವಯಿಸದಿರುವ ಯಾವುದೇ ತಾತ್ಕಾಲಿಕ ಹುದ್ದೆಯ ಸಂದರ್ಭದಲ್ಲಿ ಅನುಸರಿಸಬೇಕಾದ ನೌಕರಿಭರ್ತಿಯ ವಿಧಾನ ಮತ್ತು ನೌಕರಿಭರ್ತಿಗಾಗಿ ಅಗತ್ಯವಿರುವ ಅರ್ಹತೆಗಳು, ಯಾವುದೇ ಅಂಥ ಕೇಡರ್‌ನಲ್ಲಿ ಒಳಗೊಂಡಿರುವ ಅಥವಾ ಯಾವ ಅಂಥ ಕೇಡರ್‌ಗೆ ಸಂಬಂಧಿಸಿದಂತೆ ಸದರಿ ನೌಕರಿಭರ್ತಿ ನಿಯಮಗಳು ಅನ್ವಯವಾಗುವುವೋ ಆ ಯಾವುದೇ ಕೇಡರಿನಲ್ಲಿ ಒಳಗೊಂಡ ಸಂವಾದಿ ಖಾಯಂ ಹುದ್ದೆಗಳಿಗೆ ಅನ್ವಯವಾಗುವಂತೆಯೇ ಅನ್ವಯವಾಗತಕ್ಕದ್ದು.

**15. ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮತ್ತು ಕರಾರು ಮೂಲಕ ನೇಮಕ ಮಾಡಿಕೊಳ್ಳುವುದಕ್ಕೆ ಉಪಬಂಧ.–** (1) ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು,–

(ಎ) ಸರ್ಕಾರದ, ಕೇಂದ್ರ ಸರ್ಕಾರ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಸೇವೆಯಿಂದ ನಿವೃತ್ತನಾಗಿರುವ ಯಾರೇ ವ್ಯಕ್ತಿಯನ್ನು ಅವಶ್ಯಕವಾಗಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಅವಧಿಯವರೆಗೆ ಮತ್ತು ಸಮಾಲೋಚನೆಯು ಅವಶ್ಯವಿರುವಲ್ಲಿ ಆಯೋಗದೊಂದಿಗೆ ಸಮಾಲೋಚನೆ ಮಾಡಿದ ನಂತರ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡುವುದು;

(ಬಿ) ಒಪ್ಪಂದದ ಮೂಲಕ ನಿರ್ಧರಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥನಾಗಿರುವನೆಂದು ಅದು ಅಭಿಪ್ರಾಯಪಡುವ ಯಾರೇ ವ್ಯಕ್ತಿಯನ್ನು ಈ ಮುಂದಿನ ಪ್ರವರ್ಗದ ಹುದ್ದೆಗಳಿಗೆ ನೇಮಕ ಮಾಡುವುದು [1][XXX][1];

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 26 ಎಸ್‌ಎಸ್‌ಶರ್ 88, ದಿನಾಂಕ 06.06.1989ರ ಮೂಲಕ ಬಿಟ್ಟುಬಿಡಲಾಗಿದೆ.

(i) ಹುದ್ದೆಗಳಿಗೆ ಅನ್ವಯವಾಗುವ ನೌಕರಿ ಭರ್ತಿ ನಿಯಮಗಳಿಗನುಸಾರವಾಗಿ ಸೂಕ್ತ ಅಧಿಕಾರಿಗಳು ನೇಮಕಕ್ಕೆ ಲಭ್ಯವಿಲ್ಲದಿದ್ದಾಗ ಇಲಾಖಾ ಮುಖ್ಯಸ್ಥರ ಹುದ್ದೆಗಳು;

(ii) ತಾಂತ್ರಿಕ ಅರ್ಹತೆಯು ಅಗತ್ಯವಿರುವ ಹುದ್ದೆಗಳು; [1][XXX][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 9 ಎಸ್‌ಎಸ್‌ಆರ್ 80, ದಿನಾಂಕ 8ನೇ ಜೂನ್ 1981 ರಾಜ್ಯಪತ್ರ ದಿನಾಂಕ 18ನೇ ಜೂನ್ 1981ರ ಮೂಲಕ ಬಿಟ್ಟುಬಿಡಲಾಗಿದೆ.

(iii) ಸಚಿವರ, ರಾಜ್ಯ ಸಚಿವರ ಅಥವಾ ಉಪಸಚಿವರ ಆಪ್ತ ಸಿಬ್ಬಂದಿ ಶಾಖೆಯಲ್ಲಿನ ಹುದ್ದೆಗಳು

– ಇವುಗಳಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ನೇಮಕ ಮಾಡುವುದು ಅವಶ್ಯವೆಂದು ಭಾವಿಸಿದರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ ಹಾಗೆ ಮಾಡಬಹುದು:

[1][ಪರಂತು ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದಲ್ಲಿ ಅಥವಾ ಒಪ್ಪಂದದಲ್ಲಿ ಅಥವಾ ನಿಬಂಧನೆ ಮತ್ತು ಷರತ್ತುಗಳಲ್ಲಿ ಮತ್ತು (ಎ) ಖಂಡ ಅಥವಾ (ಬಿ) ಖಂಡದ ಅಡಿಯಲ್ಲಿ ಮಾಡುವ ಯಾರೇ ವ್ಯಕ್ತಿಯ ನೇಮಕದ ಅವಧಿಯಲ್ಲಿ ತದ್ವಿರುದ್ಧವಾಗಿರುವುದು ಏನೇ ಒಳಗೊಂಡಿದ್ದರೂ, ಹಾಗೆ ನೇಮಕ ಮಾಡಿಕೊಂಡಿರುವ ವ್ಯಕ್ತಿಯ ಸೇವೆಗಳನ್ನು ಅಂಥ ವ್ಯಕ್ತಿಯಿಂದ ಸರ್ಕಾರಕ್ಕೆ ಅಥವಾ ಸರ್ಕಾರದಿಂದ ಅಂಥ ವ್ಯಕ್ತಿಗೆ ಲಿಖಿತ ನೋಟೀಸು ನೀಡುವ ಮೂಲಕ ಯಾವುದೇ ಸಮಯದಲ್ಲಿ ಕೊನೆಗೊಳಿಸುವುದಕ್ಕೆ ಗುರಿಯಾಗಿರತಕ್ಕದ್ದು ಮತ್ತು ಅಂಥ ನೋಟೀಸಿನ ಅವಧಿಯು ಒಂದು ತಿಂಗಳಾಗಿರತಕ್ಕದ್ದು:

ಮತ್ತೂ ಪರಂತು, ಅಂಥ ಯಾರೇ ವ್ಯಕ್ತಿಯ ಸೇವೆಯನ್ನು ಕೂಡಲೇ ಕೊನೆಗೊಳಿಸಬಹುದು ಮತ್ತು ಹಾಗೆ ಕೊನೆಗೊಳಿಸಿದ ಮೇಲೆ ಆತನು ಸೇವೆಯನ್ನು ಕೊನೆಗೊಳಿಸುವ ನಿಕಟಪೂರ್ವದಲ್ಲಿ ಆತನು ಪಡೆಯುತ್ತಿದ್ದ ಅವೇ ದರಗಳಲ್ಲಿ ನೋಟೀಸಿನ ಅವಧಿಗೆ ಅಥವಾ ಸಂದರ್ಭಾನುಸಾರ ಅಂಥ ನೋಟೀಸಿನ ಯಾವ ಅವಧಿಯು ಒಂದು ತಿಂಗಳಿಗಿಂತ ಕಡಿಮೆಯಾಗುವುದೋ ಆ ಅವಧಿಗೆ ಸಹ ಆತನ ವೇತನ ಮತ್ತು ಭತ್ಯೆಯ ಮೊಬಲಗಿಗೆ ಸಮನಾದ ಮೊಬಲಗನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 20 ಎಸ್‌ಎಸ್‌ಆರ್ 80, ದಿನಾಂಕ 8ನೇ ಏಪ್ರಿಲ್ 1980 ರಾಜ್ಯಪತ್ರ ದಿನಾಂಕ 10ನೇ ಏಪ್ರಿಲ್ 1980, 25ನೇ ಜೂನ್ 1977ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(iv) ಸರ್ಕಾರವು ರಚಿಸಿರುವ ಆಯೋಗದ ಅಥವಾ ಸಮಿತಿಯ ಅಧ್ಯಕ್ಷರು ಅಧಿಕಾರೇತರರಾಗಿದ್ದರೆ ಮತ್ತು ಅವರಿಗೆ ಸಂಪುಟ ದರ್ಜೆ ಸಚಿವರ ಅಥವಾ ರಾಜ್ಯ ಸಚಿವರ ಅಥವಾ ಉಪಸಚಿವರ ಸ್ಥಾನಮಾನವನ್ನು ನೀಡಿದ್ದರೆ ಅಂಥ ಅಧ್ಯಕ್ಷರ ಆಪ್ತ ಸಿಬ್ಬಂದಿ ಶಾಖೆಯಲ್ಲಿನ ಹುದ್ದೆಗಳು][1].

[2][(v) ಸಿ ಗುಂಪಿನ ಹುದ್ದೆಗೆ ಅನ್ವಯವಾಗುವ ನೌಕರಿ ಭರ್ತಿ ನಿಯಮಗಳಿಗನುಸಾರವಾಗಿ ನೇಮಕ ಮಾಡಲು ಸೂಕ್ತ ವ್ಯಕ್ತಿಗಳು ಲಭ್ಯವಾಗದಿರುವಾಗ, ನವದೆಹಲಿಯ ಕರ್ನಾಟಕ ಭವನದಲ್ಲಿನ ಕಾನೂನು ಕೋಶದಲ್ಲಿರುವ ಆ ಗುಂಪಿನ ಹುದ್ದೆ.][2].

[3][(vi) ಸಂಸತ್ ಸದಸ್ಯರಿಗೆ ನೆರವಾಗುವುದಕ್ಕಾಗಿ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಆಪ್ತ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ವಾಹನ ಚಾಲಕರು ಮತ್ತು ಡಿ ಗುಂಪಿನ ಹುದ್ದೆಗಳು ಮತ್ತು ಸದರಿ ಉದ್ದೇಶಕ್ಕಾಗಿ ಕಂದಾಯ ಇಲಾಖೆಯಲ್ಲಿ ಮಂಜೂರು ಮಾಡಬಹುದಾದ ಡಿ ಗುಂಪಿನ ಯಾವುದೇ ಇತರ ಹುದ್ದೆ][3].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 17 ಎಸ್‌ಎಸ್‌ಆರ್ 84, ದಿನಾಂಕ 28ನೇ ಮೇ 1985 ರಾಜ್ಯಪತ್ರ ದಿನಾಂಕ 20ನೇ ಜುಲೈ 1985ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 26 ಎಸ್‌ಎಸ್‌ಆರ್ 89, ದಿನಾಂಕ 6–6–1989ರ ರಾಜ್ಯಪತ್ರ ದಿನಾಂಕ 6–7–89ರ ಮೂಲಕ ಸೇರಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಎಸ್‌ಆರ್ 2000, ದಿನಾಂಕ 11.10.2000ದ ಮೂಲಕ ಸೇರಿಸಲಾಗಿದೆ.

(2) (1)ನೇ ಉಪನಿಯಮದ (ಬಿ) ಖಂಡದ ಅಡಿಯಲ್ಲಿನ ಯಾರೇ ವ್ಯಕ್ತಿಯ ನೇಮಕದ ಒಟ್ಟು ಅವಧಿ ಅಥವಾ ಯಾವುದೇ ಹುದ್ದೆಯಲ್ಲಿ ನೇಮಕದ ಒಟ್ಟು ಅವಧಿ [1][ಐದು ವರ್ಷಗಳನ್ನು][1] ಮೀರತಕ್ಕದ್ದಲ್ಲ:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 34 ಎಸ್‌ಎಸ್‌ಆರ್ 89, ದಿನಾಂಕ 22.10.1990ರ ಮೂಲಕ ಪ್ರತಿಯೋಜಿಸಲಾಗಿದೆ.

[1][ಪರಂತು, (1)ನೇ ಉಪನಿಯಮದ (ಬಿ) ಖಂಡದ (iii)ನೇ ಉಪಖಂಡದಲ್ಲಿ [2][ಮತ್ತು (vi)ನೇ ಉಪಖಂಡದಲ್ಲಿ][2] ಹೇಳಿರುವ ಹುದ್ದೆಗಳಿಗೆ ನೇಮಕಗಳನ್ನು ಸಂಬಂಧಪಟ್ಟ ಸಚಿವರ, ರಾಜ್ಯ ಸಚಿವರ [3][ಉಪಸಚಿವರ ಅಥವಾ ಸಂಸತ್ ಸದಸ್ಯರ][3] ಪದಾವಧಿಯು ಮುಕ್ತಾಯವಾಗುವುದರೊಂದಿಗೆ ಮುಕ್ತಾಯವಾಗುವ ಅವಧಿಯವರೆಗೆ ಮಾಡಬಹುದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 34 ಎಸ್‌ಎಸ್‌ಆರ್ 89, ದಿನಾಂಕ 22.10.1990ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಎಸ್‌ಆರ್ 2000, ದಿನಾಂಕ 11.10.2000ರ ಮೂಲಕ ಸೇರಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಎಸ್‌ಆರ್ 2000, ದಿನಾಂಕ 11.10.2000ರ ಮೂಲಕ ಪ್ರತಿಯೋಜಿಸಲಾಗಿದೆ.

(3) (1)ನೇ ಉಪನಿಯಮದ (ಬಿ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಯು ಸದರಿ ಖಂಡದ ಅಡಿಯಲ್ಲಿ ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ.

**16. ನೇಮಕಕ್ಕೆ ಮತ್ತು ಅರ್ಹತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಸಡಿಲಿಸುವುದು.–** ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ,–

(ಎ) ಹುದ್ದೆಗೆ,–

(i) ರಕ್ಷಣಾ ಸೇವೆಗಳ, ಅಖಿಲ ಭಾರತ ಸೇವೆಗಳ ಅಥವಾ ಕೇಂದ್ರ ಸಿವಿಲ್ ಸೇವೆಗಳ ಅಥವಾ ಯಾವುದೇ ಇತರ ರಾಜ್ಯದ ಸಿವಿಲ್ ಸೇವೆಗಳ ಅಧಿಕಾರಿಯನ್ನು;

(ii) ತತ್ಸಮಾನ ದರ್ಜೆಯ ಹುದ್ದೆಯನ್ನು ಹೊಂದಿರುವ ಅಧಿಕಾರಿಯನ್ನು

– ರಾಜ್ಯದ ಯಾವುದೇ ಇತರ ಸೇವೆಯ ಯಾವ ನೌಕರಭರ್ತಿಗೆ ಈ ನಿಯಮಗಳು ಅನ್ವಯಿಸುವುವೋ ಆ ಯಾವುದೇ ಇತರ ಸೇವೆಯಿಂದ ವರ್ಗಾವಣೆ ಮಾಡುವ ಮೂಲಕ ಅಥವಾ ಪ್ರತಿನಿಯೋಜನೆ ಮಾಡುವ ಮೂಲಕ:

[1][ಪರಂತು, ಯಾವ ಹುದ್ದೆಗೆ ಅವನನ್ನು ವರ್ಗಾಯಿಸಲು ಉದ್ದೇಶಿಸಲಾಗಿದೆಯೋ ಆ ಹುದ್ದೆಗೆ ಅಧಿಕಾರಿಯು ಕರ್ನಾಟಕ ಸಿವಿಲ್ ಸೇವೆಗಳ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳ) ನಿಯಮಗಳು, 1974ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ ಹೊರತು, ಈ ಉಪಖಂಡದ ಅಡಿಯಲ್ಲಿ ವರ್ಗಾವಣೆ ಮಾಡುವ ಮೂಲಕ ನೇಮಕ ಮಾಡತಕ್ಕದ್ದಲ್ಲ][1:]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 44 ಎಸ್‌ಎಸ್‌ಆರ್ 94, ದಿನಾಂಕ 21.1.1998ರ ಮೂಲಕ ಪ್ರತಿಯೋಜಿಸಲಾಗಿದೆ.

[1][ಮತ್ತೂ ಪರಂತು, ತತ್ಸಮಾನ ದರ್ಜೆ ಹೊಂದಿಲ್ಲದ ಸೇವೆಗೆ ಸೇರಿರುವ ಅಧಿಕಾರಿಯನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ನೇಮಕ ಮಾಡುವುದು ಅಗತ್ಯವಿದ್ದರೆ ಅಂಥ ಸೇವೆಯಲ್ಲಿ ಅದರ ನಿಕಟ ಕೆಳದರ್ಜೆಯಲ್ಲಿ ಹುದ್ದೆಯನ್ನು ಹೊಂದಿರುವ ಅಧಿಕಾರಿಯನ್ನು ಎರಡು ವರ್ಷಗಳನ್ನು ಮೀರದ ಅವಧಿಗಾಗಿ ಪ್ರತಿನಿಯೋಜನೆಯ ಮೂಲಕ ನೇಮಕ ಮಾಡಬಹುದು:

ಮತ್ತೂ ಪರಂತು, ಅಂಥ ಇತರ ಸೇವೆಯಲ್ಲಿ ಅಂಥ ಅಧಿಕಾರಿಗೆ ಮುಂದಿನ ಬಡ್ತಿ ಹುದ್ದೆಗೆ ಸಮಾನವಾದ ಅಥವಾ ಅದಕ್ಕಿಂತ ಮೇಲಿನ ಹುದ್ದೆಗೆ ಅಂಥ ಯಾವುದೇ ನೇಮಕ ಮಾಡತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 9 ಎಸ್‌ಎಸ್‌ಆರ್ 80, ದಿನಾಂಕ 1981ರ ಮೂಲಕ ಸೇರಿಸಲಾಗಿದೆ.

(iii) ಅಧಿಕಾರಿಯು ಧಾರಣ ಮಾಡಿರುವ ಹುದ್ದೆಯನ್ನು ನಿರ್ವಹಿಸಲು ದೈಹಿಕ ನ್ಯೂನತೆಯಿಂದ ಖಾಯಂ ಆಗಿ ಅಸಮರ್ಥನಾಗಿರುವ ಅಧಿಕಾರಿಯನ್ನು:

ಪರಂತು, ಈ ಉಪಖಂಡದ ಅಡಿಯಲ್ಲಿ,–

(1) ಅಂಥ ಅಧಿಕಾರಿಯ ಒಪ್ಪಿಗೆ ಪಡೆಯದೆ ಆತ ಹೊಂದಿರುವ ಹುದ್ದೆಗಿಂತ ಕೆಳಗಿನ ಹುದ್ದೆಗೆ;

(2) ಅಂಥ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಯಾವುದೇ ಇತರ ಸಮಾನ ಹುದ್ದೆ ಇಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟ ಹೊರತು ಅಂಥ ಅಧಿಕಾರಿ ಹೊಂದಿರುವ ಹುದ್ದೆಗಿಂತ ಮೇಲಿನ ಹುದ್ದೆಗೆ

– ನೇಮಕವನ್ನು ಮಾಡತಕ್ಕದ್ದಲ್ಲ:

[1][(iiiಎ) ಅಧಿಕಾರಿಯು ಧಾರಣ ಮಾಡಿರುವ ಹುದ್ದೆಯನ್ನು ನಿರ್ವಹಿಸಲು ದೈಹಿಕ ನ್ಯೂನತೆಯಿಂದ ತಾತ್ಕಾಲಿಕವಾಗಿ ಅಸಮರ್ಥನಾಗಿರುವ ಅಧಿಕಾರಿಯನ್ನು:

ಪರಂತು ಈ ಉಪಖಂಡದ ಅಡಿಯಲ್ಲಿನ ನೇಮಕದ ಅವಧಿಯು, ಆತ ಸೇರಿರುವ ಸೇವೆಯಲ್ಲಿನ ಹುದ್ದೆಯನ್ನು ಆತ ಹೊಂದುವುದಕ್ಕೆ ಆತನನ್ನು ಅಸಮರ್ಥನನ್ನಾಗಿಸಿರುವ ದೈಹಿಕ ನ್ಯೂನತೆಯ ಅವಧಿಗಿಂತ ಹೆಚ್ಚಾಗಿರತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 9 ಎಸ್‌ಎಸ್‌ಆರ್ 80, ದಿನಾಂಕ 8ನೇ ಜೂನ್ 1981, ರಾಜ್ಯಪತ್ರ 18ನೇ ಜೂನ್ 1981ರ ಮೂಲಕ ಸೇರಿಸಲಾಗಿದೆ.

(iv) ರಾಜ್ಯ ಸಿವಿಲ್ ಸೇವೆಗಳ ಎ ಗುಂಪಿನ ಹುದ್ದೆಗೆ ಪ್ರತಿನಿಯೋಜನೆ ಮೇಲೆ ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿಸಿದ ವಿಶ್ವವಿದ್ಯಾಲಯದ ಸೇವೆಯಲ್ಲಿರುವ, ವಿಶೇಷ ಅರ್ಹತೆಗಳನ್ನು ಹೊಂದಿರುವ ಮತ್ತು ಐದು ವರ್ಷಗಳನ್ನು ಮೀರದ ಅವಧಿಯವರೆಗೆ ತತ್ಸಮಾನ ಹುದ್ದೆಯನ್ನು ಹೊಂದಿರುವ ವ್ಯಕ್ತಿಯನ್ನು ಮತ್ತು ಪ್ರತಿಯೊಂದು ಪ್ರಕರಣದಲ್ಲಿ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮೇಲೆ

– ನೇಮಕ ಮಾಡಬಹುದು:

[1][ಪರಂತು, ಪ್ರಕರಣದ ವಿಶೇಷ ಪರಿಸ್ಥಿತಿಗಳ ದೃಷ್ಟಿಯಿಂದ ಈ ಖಂಡದ ಅಡಿಯಲ್ಲಿ ನಿಗದಿಪಡಿಸಿರುವ ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಪ್ರತಿನಿಯೋಜನೆಯ ಅವಧಿಯನ್ನು ವಿಸ್ತರಿಸಬೇಕಾಗಿದೆಯೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಗರಿಷ್ಠ ಮೂರು ವರ್ಷಗಳಿಗೆ ಒಳಪಟ್ಟು ಒಂದು ಸಲಕ್ಕೆ

ಒಂದು ವರ್ಷದಷ್ಟು ಹೆಚ್ಚಿನ ಅವಧಿಗೆ ಅದನ್ನು ವಿಸ್ತರಿಸಬಹುದು. ಆದಾಗ್ಯೂ, ವಿಸ್ತರಿತ ಅವಧಿಯೂ ಸೇರಿದಂತೆ ಒಟ್ಟು ಪ್ರತಿನಿಯೋಜನೆಯ ಅವಧಿಯು ಎಂಟು ವರ್ಷಗಳನ್ನು ಮೀರತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 30 ಎಸ್‌ಎಸ್‌ಆರ್ 99, ದಿನಾಂಕ 9.6.2000ರ ಮೂಲಕ ಸೇರಿಸಲಾಗಿದೆ.

(ಬಿ) ಗೊತ್ತುಪಡಿಸಿರುವ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಲಭ್ಯವಾಗದಿದ್ದರೆ, ಯಾವುದೇ ಸೇವೆಗೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ನೇರ ನೌಕರಿ ಭರ್ತಿ ಉದ್ದೇಶಗಳಿಗಾಗಿ ಗೊತ್ತುಪಡಿಸಿದ ಅರ್ಹತೆಗಳನ್ನು ಅದರಲ್ಲಿ ನಿಗದಿಪಡಿಸಬಹುದಾದಷ್ಟು ಅವಧಿಯವರೆಗೆ ಅಧಿಸೂಚನೆಯ ಮೂಲಕ ಸಡಿಲಿಸಬಹುದು:

ಪರಂತು, ಆಯೋಗದೊಂದಿಗೆ ಸಮಾಲೋಚಿಸಿ ನೌಕರಿ ಭರ್ತಿಯನ್ನು ಮಾಡಬೇಕಾಗಿರುವ ಹುದ್ದೆಗೆ ಸಂಬಂಧಿಸಿದಂತೆ ಅಂಥ ಸಡಿಲಿಸುವಿಕೆಯನ್ನು ಆಯೋಗದೊಂದಿಗೆ ಸಮಾಲೋಚಿಸಿದ ಹೊರತು ಮಾಡತಕ್ಕದ್ದಲ್ಲ.

[1][**16–ಎ ಸೇವೆಯೊಳಗೆ ವರ್ಗಾವಣೆ ಮೂಲಕ ನೇಮಕ ಮಾಡುವುದು.–** ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಇಲಾಖಾ ಮುಖ್ಯಸ್ಥರು ಸೇವೆಗೆ ಸಂಬಂಧಿಸಿದಂತೆ, ಸಾರ್ವಜನಿಕ ಹಿತ ದೃಷ್ಟಿಯಿಂದ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಸರ್ಕಾರವು ಈ ಸಂಬಂಧವಾಗಿ ಹೊರಡಿಸಬಹುದಾದ ಯಾವುದೇ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು, ಸಿ ಗುಂಪು ಅಥವಾ ಡಿ ಗುಂಪಿನ ಸದಸ್ಯರನ್ನು ಜೇಷ್ಠತೆಯ ಒಂದು ಘಟಕದಲ್ಲಿನ ಹುದ್ದೆಯಿಂದ ಜೇಷ್ಠತೆಯ ಮತ್ತೊಂದು ಘಟಕದಲ್ಲಿನ ಅದೇ ಕೇಡರ್‌ನಲ್ಲಿನ ಸಮಾನ ಹುದ್ದೆಗೆ ವರ್ಗಾವಣೆ ಮೂಲಕ ನೇಮಕ ಮಾಡಬಹುದು:

ಪರಂತು, ಸರ್ಕಾರಿ ನೌಕರನು ಸೇವೆಯಲ್ಲಿರುವಾಗ ಒಂದಕ್ಕಿಂತ ಹೆಚ್ಚು ಸಲ ವರ್ಗಾವಣೆಯ ಅಂಥ ನೇಮಕವನ್ನು ಮಾಡತಕ್ಕದ್ದಲ್ಲ.

**ವಿವರಣೆ:–** (1) 'ಜೇಷ್ಠತಾ ಘಟಕ' ಎಂದರೆ, ಹುದ್ದೆಗೆ ಸಂಬಂಧಿಸಿದಂತೆ ನೇಮಕ ಪ್ರಾಧಿಕಾರದ ಅಧಿಕಾರವ್ಯಾಪ್ತಿ ಎಂದು ಅರ್ಥ.

(2) ಒಂದು ಕೇಡರ್‌ನಿಂದ ಇನ್ನೊಂದು ಕೇಡರ್‌ಗೆ ವರ್ಗಾವಣೆ ಮಾಡುವುದಕ್ಕೆ ಅನುಮತಿಸತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 147 ಎಸ್‌ಎಸ್‌ಆರ್ 2004, ದಿನಾಂಕ 25.7.2005ರ ಮೂಲಕ ಸೇರಿಸಲಾಗಿದೆ.

**17. ಕೆಲವು ಪ್ರಕರಣಗಳಲ್ಲಿ ನೇರ ನೌಕರಿ ಭರ್ತಿ ಮೂಲಕ ಅಥವಾ ಬಡ್ತಿ ಮೂಲಕ ನೇಮಕ.–** ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ನೇಮಕ ಪ್ರಾಧಿಕಾರವು,–

(ಎ) ಬಡ್ತಿ ನೀಡುವ ಮೂಲಕ ತುಂಬಲು ಮೀಸಲಿರಿಸಿರುವ ಖಾಲಿ ಹುದ್ದೆಗೆ, ಬಡ್ತಿ ನೀಡುವುದಕ್ಕೆ ಪರಿಗಣಿಸಬೇಕಾದ ಅರ್ಹ ವ್ಯಕ್ತಿಗಳು ಹಾಗೆ ಬಡ್ತಿ ನೀಡುವುದಕ್ಕೆ ಸೂಕ್ತರಾಗಿರುವುದಿಲ್ಲವೆಂದು ಅದಕ್ಕೆ ಮನದಟ್ಟಾದರೆ, ನೇರ ನೌಕರಿ ಭರ್ತಿ ಮೂಲಕ ತುಂಬಬಹುದು; ಅಥವಾ

(ಬಿ) ನೇರ ನೌಕರಿ ಭರ್ತಿ ಮೂಲಕ ತುಂಬಲು ಮೀಸಲಿರಿಸಿದ ಖಾಲಿ ಹುದ್ದೆಯನ್ನು, ಅಂಥ ಹುದ್ದೆಯು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯವರೆಗೆ ಖಾಲಿಯಿರುವ ಸಂಭವವಿಲ್ಲದಿರುವಾಗ ಬಡ್ತಿ ನೀಡುವ ಮೂಲಕ ತುಂಬಬಹುದು;

[1][(ಸಿ) ಬಿಟ್ಟುಬಿಡಲಾಗಿದೆ][1].

[2][**ಸೂಚನೆ:** (ಬಿ) ಖಂಡದಲ್ಲಿ ಉಪಬಂಧಿಸಿರುವುದನ್ನುಳಿದು, ನೇರ ನೌಕರಿ ಭರ್ತಿ ಮೂಲಕ ತುಂಬಬೇಕಾದ ಹುದ್ದೆಗೆ ಯಾವುದೇ ಬಡ್ತಿ ನೀಡತಕ್ಕದ್ದಲ್ಲ][2].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 42 ಎಸ್‌ಆರ್‌ಆರ್ 93, ದಿನಾಂಕ 9.2.1994, ರಾಜ್ಯಪತ್ರ ದಿನಾಂಕ 24.2.94ರ ಮೂಲಕ ಬಿಟ್ಟುಬಿಡಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 42, ಎಸ್‌ಆರ್‌ಆರ್ 93, ದಿನಾಂಕ 9.2.1994, ರಾಜ್ಯಪತ್ರ ದಿನಾಂಕ 24.2.94ರ ಮೂಲಕ ಸೇರಿಸಲಾಗಿದೆ.

**18. ನೇಮಕಗೊಂಡ ಹುದ್ದೆಗೆ ಸೇರುವ ಕಾಲ.–** (1) ನೇರ ನೌಕರಿ ಭರ್ತಿ ಮೂಲಕ ನೇಮಕಗೊಂಡಿರುವ ಅಭ್ಯರ್ಥಿಯು, ನೌಕರಿ ಭರ್ತಿ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಹುದ್ದೆಯ ಪ್ರಭಾರವನ್ನು, ನೌಕರಿ ಭರ್ತಿ ಆದೇಶದ ದಿನಾಂಕದ ತರುವಾಯ ಸಾಧ್ಯವಾದಷ್ಟು ಬೇಗನೆ, ಆದರೆ ಆ ದಿನಾಂಕದಿಂದ [1][ಹದಿನೈದು ದಿನಗಳನ್ನು][1] ಮೀರದಂತೆ ವಹಿಸಿಕೊಳ್ಳತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 42, ಎಸ್‌ಆರ್‌ಆರ್ 93, ದಿನಾಂಕ 9.02.1994ರ ಮೂಲಕ ಸೇರಿಸಲಾಗಿದೆ.

**ವಿವರಣೆ.–** ಈ ಉಪನಿಯಮದ ಉದ್ದೇಶಕ್ಕಾಗಿ "ನೇಮಕದ ಆದೇಶದ ದಿನಾಂಕ" ಎಂದರೆ, ಅಭ್ಯರ್ಥಿ ನೀಡಿರುವ ವಿಳಾಸಕ್ಕೆ ನೇಮಕ ಆದೇಶವನ್ನು ನೋಂದಾಯಿತ ಅಂಚೆಯ ಮೂಲಕ ರವಾನಿಸಿದ ದಿನಾಂಕ ಎಂದು ಅರ್ಥ.

(2) (1)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ನೇಮಕ ಪ್ರಾಧಿಕಾರವು, ಅಭ್ಯರ್ಥಿಯು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಹೆಚ್ಚಿನ ಕಾಲಾವಕಾಶವನ್ನು ನೀಡುವುದಕ್ಕೆ ಸರಿಯಾದ ಮತ್ತು ಸಮರ್ಪಕವಾದ ಕಾರಣಗಳಿವೆ ಎಂದು ಅದಕ್ಕೆ ಮನವರಿಕೆಯಾದರೆ ಅದು ಅವಶ್ಯವೆಂದು ಭಾವಿಸಬಹುದಾದಷ್ಟು ಹೆಚ್ಚಿನ ಕಾಲಾವಕಾಶವನ್ನು ಲಿಖಿತ ಆದೇಶದ ಮೂಲಕ ನೀಡಬಹುದು.

(3) (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಥವಾ (2)ನೇ ಉಪನಿಯಮದ ಅಡಿಯಲ್ಲಿ ನೀಡಲಾದ ಇನ್ನೂ ಹೆಚ್ಚಿನ ಕಾಲದೊಳಗೆ ಹುದ್ದೆಯ ಪ್ರಭಾರ ವಹಿಸಿಕೊಳ್ಳಲು ವಿಫಲನಾದ ಅಭ್ಯರ್ಥಿಯ ಹೆಸರನ್ನು, ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯಿಂದ ತೆಗೆದುಹಾಕಿರುವುದಾಗಿ ಪರಿಗಣಿಸತಕ್ಕದ್ದು ಮತ್ತು ಅಂಥ ಸಂಬಂಧಪಟ್ಟ ಅಭ್ಯರ್ಥಿಗಳು ನೇಮಕಕ್ಕೆ ಅನರ್ಹರಾಗಿರುವುದು ನಿಂತುಹೋಗತಕ್ಕದ್ದು.

**19. ಪ್ರೊಬೇಷನ್ ಮತ್ತು ಬಡ್ತಿ ಮೂಲಕ ನೇಮಕಗಳು.–** (1) ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇರ ನೌಕರಿ ಭರ್ತಿ ಮೂಲಕ ಮಾಡುವ ಎಲ್ಲಾ ನೇಮಕಾತಿಗಳು ಎರಡು ವರ್ಷಗಳಿಗಿಂತ ಕಡಿಮೆಯಲ್ಲದಂತೆ ಅಂಥ ಸೇವೆಗೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿದ ನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಅಂಥ ಅವಧಿಯವರೆಗೆ ಪ್ರೊಬೇಷನ್ ಮೇಲಿರತಕ್ಕದ್ದು:

ಪರಂತು, ಪ್ರೊಬೇಷನ್ ಅವಧಿಯು ಇಲ್ಲದಿರುವಾಗ ಅಥವಾ ನೌಕರಿ ಭರ್ತಿ ನಿಯಮಗಳಲ್ಲಿ ಎರಡು ವರ್ಷಗಳಿಗಿಂತ ಕಡಿಮೆ ಪ್ರೊಬೇಷನ್ ಅವಧಿಯನ್ನು ನಿಗದಿಪಡಿಸಿರುವಾಗ, ಅಂಥ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರೊಬೇಷನ್ ಅವಧಿಯು ಎರಡು ವರ್ಷಗಳದ್ದಾಗಿರತಕ್ಕದ್ದು:

ಮತ್ತೂ ಪರಂತು, ಸರ್ಕಾರವು ಆದೇಶದ ಮೂಲಕ,–

(i) ಯಾವ ಹುದ್ದೆಗೆ ಆತನನ್ನು ನೇಮಕ ಮಾಡಲಾಗಿದೆಯೋ ಆ ಹುದ್ದೆಯ ಕರ್ತವ್ಯಗಳನ್ನು ಅಥವಾ ಯಾವ ಹುದ್ದೆಯ ಕರ್ತವ್ಯಗಳು ಅಂಥ [1][ಹುದ್ದೆಯಂಥವೇ ಆಗಿವೆ ಮತ್ತು ಸಮಾನವಾದವುಗಳು][1] ಆಗಿವೆ ಎಂದು ಸರ್ಕಾರವು ಅಭಿಪ್ರಾಯಪಡುವುದೋ ಆ ಹುದ್ದೆಯ ಕರ್ತವ್ಯಗಳನ್ನು ಅವನು ಎರಡು ವರ್ಷಗಳ ಅವಧಿಯವರೆಗೆ ನಿರ್ವಹಿಸಿದ್ದರೆ ಆ ವ್ಯಕ್ತಿಯ ಪ್ರೊಬೇಷನ್ ಅವಧಿಯನ್ನು ಮನ್ನಾ ಮಾಡಬಹುದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 16 ಎಸ್‌ಎಸ್‌ಆರ್ 83 (1), ದಿನಾಂಕ 15.3.1989ರ ಮೂಲಕ ಪ್ರತಿಯೋಜಿಸಲಾಗಿದೆ.

(ii) ಯಾವ ಹುದ್ದೆಗೆ ಆತನನ್ನು ನೇಮಕ ಮಾಡಲಾಗಿದೆಯೋ ಆ ಹುದ್ದೆಯ ಕರ್ತವ್ಯಗಳನ್ನು ಅಥವಾ ಯಾವ ಹುದ್ದೆಯ ಕರ್ತವ್ಯಗಳು ಅಂಥ [1][ಹುದ್ದೆಯಂತವುವೇ ಆಗಿವೆ ಮತ್ತು ಸಮಾನವಾದವುಗಳು][1] ಆಗಿವೆ ಎಂದು ಸರ್ಕಾರವು ಅಭಿಪ್ರಾಯಪಡುವುದೋ ಆ ಹುದ್ದೆಯ ಕರ್ತವ್ಯಗಳನ್ನು ಯಾವ ಅವಧಿಯಲ್ಲಿ ಅವನು ನಿರ್ವಹಿಸಿರುವನೋ ಆ ಅವಧಿಯನ್ನು ಮೀರದಂತೆ ಆ ವ್ಯಕ್ತಿಯ ಪ್ರೊಬೇಷನ್ ಅವಧಿಯನ್ನು ಆ ಅವಧಿಯಷ್ಟು ಕಡಿಮೆ ಮಾಡಬಹುದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 16 ಎಸ್‌ಎಸ್‌ಆರ್ 83 (1), ದಿನಾಂಕ 15.3.1989ರ ಮೂಲಕ ಪ್ರತಿಯೋಜಿಸಲಾಗಿದೆ.

(2) (1)ನೇ ಉಪನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಕರ್ನಾಟಕ ಜಿಲ್ಲಾ ನ್ಯಾಯಾಧೀಶರ (ನೌಕರಿ ಭರ್ತಿ) ನಿಯಮಗಳು, 1962ರ ಅಡಿಯಲ್ಲಿ ನೌಕರಿಭರ್ತಿ ಮಾಡಿಕೊಂಡ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ.

(3) (ಎ) ಯಾವುದೇ ಸೇವೆಗೆ ಅಥವಾ ಹುದ್ದೆಗೆ ಸಂಬಂಧಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ಮತ್ತು (ಎಫ್) ಖಂಡದ ಪರಂತುಕಕ್ಕೆ ಒಳಪಟ್ಟು ಬಡ್ತಿ ನೀಡುವ ಮೂಲಕ ಮಾಡುವ ಎಲ್ಲಾ ನೇಮಕಾತಿಗಳು ಒಂದು ವರ್ಷದ ಅವಧಿಯವರೆಗೆ ಕಾರ್ಯನಿರ್ವಹಣಾಧಾರಿತವಾಗಿರತಕ್ಕದ್ದು, ಈ ಅವಧಿಯನ್ನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನೇಮಕ ಪ್ರಾಧಿಕಾರವು ಒಂದು ವರ್ಷ ಮೀರದ ಅವಧಿಗೆ ವಿಸ್ತರಿಸಬಹುದು:

ಪರಂತು, ಸರ್ಕಾರವು ಆದೇಶದ ಮೂಲಕ,–

(i) ಆತನಿಗೆ ಯಾವ ಹುದ್ದೆಗೆ ಬಡ್ತಿ ನೀಡಲಾಗಿದೆಯೋ ಆ ಹುದ್ದೆಯ ಕರ್ತವ್ಯಗಳನ್ನು ಆತನು ಈಗಾಗಲೇ ಒಂದು ವರ್ಷದ ಅವಧಿಯವರೆಗೆ ನಿರ್ವಹಿಸಿದ್ದರೆ ಅಂಥ ವ್ಯಕ್ತಿಯ ಕಾರ್ಯನಿರ್ವಹಣಾ ಅವಧಿಯನ್ನು ಮನ್ನಾ ಮಾಡಬಹುದು; ಅಥವಾ

(ii) ಅಂಥ ಹುದ್ದೆಯ ಕರ್ತವ್ಯಗಳನ್ನು ಆತನು ನಿರ್ವಹಿಸಿರುವಷ್ಟು ಅವಧಿಯನ್ನು ಮೀರದಂತೆ ಅಂಥ ಅವಧಿಯಷ್ಟು ಅಂಥ ವ್ಯಕ್ತಿಯ ಕಾರ್ಯನಿರ್ವಹಣಾ ಅವಧಿಯನ್ನು ಕಡಿಮೆ ಮಾಡಬಹುದು.

(ಬಿ) ಕಾರ್ಯನಿರ್ವಹಣಾ ಅವಧಿ ಅಥವಾ ಸಂದರ್ಭಾನುಸಾರ ಕಡಿಮೆ ಮಾಡಿದ ಅಥವಾ ವಿಸ್ತರಿಸಿದ ಕಾರ್ಯನಿರ್ವಹಣಾ ಅವಧಿಯ ಕೊನೆಯಲ್ಲಿ ನೇಮಕ ಪ್ರಾಧಿಕಾರವು, ಆತನಿಗೆ ಯಾವ ಹುದ್ದೆಗೆ ಬಡ್ತಿ ನೀಡಲಾಯಿತೋ ಆ ಹುದ್ದೆಯನ್ನು ಹೊಂದಲು ಹಾಗೆ ಬಡ್ತಿ ಹೊಂದಿದ ವ್ಯಕ್ತಿಯ ಅರ್ಹತೆಯನ್ನು ಪರಿಗಣಿಸತಕ್ಕದ್ದು.

(ಸಿ) ಕಾರ್ಯನಿರ್ವಹಣಾ ಅವಧಿಯಲ್ಲಿ ಅಥವಾ ಕಡಿಮೆ ಮಾಡಿದ ಅಥವಾ ವಿಸ್ತರಿಸಿದ ಕಾರ್ಯನಿರ್ವಹಣಾ ಅವಧಿಯಲ್ಲಿ ಹಾಗೆ ಬಡ್ತಿ ಹೊಂದಿದ ವ್ಯಕ್ತಿಯ ಕಾರ್ಯನಿರ್ವಹಣೆಯು ತೃಪ್ತಿಕರವಾಗಿದೆಯೆಂದು ನೇಮಕ ಪ್ರಾಧಿಕಾರವು ಪರಿಗಣಿಸಿದರೆ, ಅದು ಸಾಧ್ಯವಾದಷ್ಟು ಬೇಗನೆ ಆ ವ್ಯಕ್ತಿಯು ಕಾರ್ಯನಿರ್ವಹಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾನೆಂದು ಘೋಷಿಸುವ ಒಂದು ಆದೇಶವನ್ನು ಹೊರಡಿಸತಕ್ಕದ್ದು. ಅಂಥ ಆದೇಶವು, ಸಂದರ್ಭಾನುಸಾರ, ಕಾರ್ಯನಿರ್ವಹಣಾ ಅವಧಿ ಅಥವಾ ಕಡಿಮೆ ಮಾಡಿದ ಅಥವಾ ವಿಸ್ತರಿಸಿದ ಕಾರ್ಯನಿರ್ವಹಣಾ ಅವಧಿಯು ಮುಕ್ತಾಯವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಡಿ) (ಎ) ಖಂಡದ ಅಡಿಯಲ್ಲಿನ ಕಾರ್ಯನಿರ್ವಹಣಾ ಅವಧಿ ಅಥವಾ ಸಂದರ್ಭಾನುಸಾರ ವಿಸ್ತರಿಸಲಾದ ಕಾರ್ಯನಿರ್ವಹಣಾ ಅವಧಿಯ ಕೊನೆಯಲ್ಲಿ, ನೇಮಕ ಪ್ರಾಧಿಕಾರವು ಯಾವ ಹುದ್ದೆಗೆ ಆತನಿಗೆ ಬಡ್ತಿ ನೀಡಲಾಯಿತೋ ಆ ಹುದ್ದೆಗೆ ಆತನು ಅರ್ಹನಾಗಿಲ್ಲವೆಂದು ಪರಿಗಣಿಸಿದರೆ, ಅದು ಆದೇಶದ ಮೂಲಕ ಬಡ್ತಿಗೆ ಮೊದಲು ಆತ ಹೊಂದಿದ್ದ ಹಿಂದಿನ ಹುದ್ದೆಗೆ ಆ ವ್ಯಕ್ತಿಯನ್ನು ನೇಮಿಸಬಹುದು.

(ಇ) ಒಬ್ಬ ವ್ಯಕ್ತಿಯು ಕಾರ್ಯನಿರ್ವಹಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವನೆಂಬ ಬಗ್ಗೆ ನಿರ್ದಿಷ್ಟ ಆದೇಶವನ್ನು ಹೊರಡಿಸದ ಹೊರತು, ಆತ ಅದನ್ನು ಹಾಗೆ ಪೂರ್ಣಗೊಳಿಸಿರುವುದಾಗಿ ಪರಿಗಣಿಸತಕ್ಕದ್ದಲ್ಲ. ಈ ಉಪನಿಯಮದ (ಸಿ) ಖಂಡ ಅಥವಾ (ಡಿ) ಖಂಡದ ಅಡಿಯಲ್ಲಿ ಆದೇಶವನ್ನು ಹೊರಡಿಸಲು ಆಗುವ ಯಾವುದೇ ವಿಳಂಬವು ಅಂಥ ವ್ಯಕ್ತಿಯು ಕಾರ್ಯನಿರ್ವಹಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾನೆಂದು ಭಾವಿಸುವುದಕ್ಕೆ ಅವನನ್ನು ಹಕ್ಕುಳ್ಳವನನ್ನಾಗಿ ಮಾಡುವುದಿಲ್ಲ.

(ಎಫ್) (ಸಿ) ಖಂಡದ ಅಡಿಯಲ್ಲಿ, ಕಾರ್ಯನಿರ್ವಹಣೆಯನ್ನು ತೃಪ್ತಿಕರವಾಗಿ ಪೂರ್ಣ ಗೊಳಿಸಿರುವನೆಂದು ಘೋಷಿಸಲಾದ ವ್ಯಕ್ತಿಯನ್ನು ಒಂದು ಸಮೂಹ ಅಥವಾ ಪ್ರವರ್ಗದ ಖಾಯಂ ಕೇಡರ್‌ನಲ್ಲಿರಬಹುದಾದ ಅಥವಾ ಉಂಟಾಗಬಹುದಾದ ಯಾವುದೇ ಮೂಲ ಹುದ್ದೆಗೆ, ಯಾವ ಗುಂಪು ಅಥವಾ ಪ್ರವರ್ಗದಲ್ಲಿನ ಸೇವೆಗೆ ಅವನಿಗೆ ಬಡ್ತಿ ನೀಡಲಾಯಿತೋ ಆ ಗುಂಪು ಅಥವಾ ಪ್ರವರ್ಗದ ಸೇವೆಯ ಪೂರ್ಣಕಾಲಿಕ ಸದಸ್ಯನನ್ನಾಗಿ ಬೇಗನೆ ಖಾಯಂಗೊಳಿಸತಕ್ಕದ್ದು:

ಪರಂತು, ಯಾವುದೇ ಸೇವೆಯಲ್ಲಿರುವ ತಾತ್ಕಾಲಿಕ ಹುದ್ದೆಗೆ ಬಡ್ತಿ ನೀಡುವ ಮೂಲಕ ನೇಮಕ ಮಾಡಿದಾಗ, ಸಂಬಂಧಪಟ್ಟ ವ್ಯಕ್ತಿಯು ತಾತ್ಕಾಲಿಕ ಹುದ್ದೆಯಲ್ಲಿ ಕಾರ್ಯನಿರ್ವಹಣಾ ಆಧಾರದ ಮೇಲೆ ಮುಂದುವರಿಯತಕ್ಕದ್ದು.

(4) ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಅಡಿಯಲ್ಲಿ ರಚಿಸಿದ ಯಾವುದೇ ಇತರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪನಿಯಮದ ಎರಡನೇ ಪರಂತುಕದ ಅಥವಾ ಸಂದರ್ಭಾನುಸಾರ (3)ನೇ ಉಪನಿಯಮದ (ಎ) ಖಂಡದ ಪರಂತುಕದ ಅಡಿಯಲ್ಲಿ ಯಾವ ವ್ಯಕ್ತಿಯ ಪ್ರೊಬೇಷನ್ ಅವಧಿಯನ್ನು ಅಥವಾ ಕಾರ್ಯನಿರ್ವಹಣಾ ಅವಧಿಯನ್ನು ಮನ್ನಾ ಮಾಡಲಾಗಿದೆಯೋ ಅಥವಾ ಕಡಿಮೆ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಹಾಗೆ ಮನ್ನಾಮಾಡಿರದಿದ್ದರೆ ಅಥವಾ ಕಡಿಮೆ ಮಾಡಿರದಿದ್ದರೆ ಹೇಗೋ ಹಾಗೆ [1][ಆ ವ್ಯಕ್ತಿಯು ಒಳಪಡುತ್ತಿದ್ದ][1] ಪ್ರೊಬೇಷನ್ ಅಥವಾ ಸಂದರ್ಭಾನುಸಾರ ಕಾರ್ಯನಿರ್ವಹಣಾ ಅವಧಿಯು ಮುಕ್ತಾಯವಾಗುವವರೆಗೆ ಸ್ಥಿರೀಕರಣಕ್ಕೆ [1][ಅಥವಾ ಮುಂಬಡ್ತಿಗೆ][1] ಅರ್ಹನಾಗಿರತಕ್ಕದ್ದಲ್ಲ.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 1 ಎಸ್‌ಆರ್‌ಆರ್ 79, ದಿನಾಂಕ 9ನೇ ಆಗಸ್ಟ್ 1979 ರಾಜ್ಯಪತ್ರ ದಿನಾಂಕ 23ನೇ ಆಗಸ್ಟ್ 1979ರ ಮೂಲಕ ಸೇರಿಸಲಾಗಿದೆ.

**20. ದುರ್ವರ್ತನೆ.–** ಒಬ್ಬ ಅಭ್ಯರ್ಥಿಯು, ಮತ್ತೊಬ್ಬನಂತೆ ನಟಿಸಿರುವ ಅಥವಾ ಸೃಷ್ಟಿಸಿದ ದಾಖಲೆಗಳನ್ನು ಅಥವಾ ತಿದ್ದಿದ ದಾಖಲೆಗಳನ್ನು ಸಲ್ಲಿಸಿರುವ ಅಥವಾ ತಪ್ಪು ಅಥವಾ ಸುಳ್ಳು ಅಥವಾ ಮುಖ್ಯ ಮಾಹಿತಿಯನ್ನು ಮರೆಮಾಚುವ ಹೇಳಿಕೆಗಳನ್ನು ನೀಡಿರುವ ಅಥವಾ ನೌಕರಿ ಭರ್ತಿಯ ಉದ್ದೇಶಗಳಿಗಾಗಿ ನಡೆಸಿದ ಪರೀಕ್ಷೆಯಲ್ಲಿ ಅನುಚಿತ ಮಾರ್ಗಗಳನ್ನು ಬಳಸಿರುವ ಅಥವಾ ಬಳಸಲು ಪ್ರಯತ್ನಿಸಿರುವ ಅಥವಾ ಆತನ ನೌಕರಿ ಭರ್ತಿಗೆ ಸಂಬಂಧಿಸಿದಂತೆ ಯಾವುದೇ ಇತರ ಅಕ್ರಮ ಅಥವಾ ಅಸಮರ್ಪಕ ಮಾರ್ಗಗಳನ್ನು ಅನ್ಯಥಾ ಅನುಸರಿಸಿ ತಪ್ಪಿತಸ್ಥನಾಗಿರುವನೆಂದು ಕಂಡುಬಂದರೆ, ಆತ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಮತ್ತು ಶಿಸ್ತು ಕ್ರಮಕ್ಕೆ ಸ್ವತಃ ಗುರಿಯಾಗುವುದರ ಜೊತೆಗೆ,–

(ಎ) ಅಭ್ಯರ್ಥಿಗಳ ಆಯ್ಕೆಗಾಗಿ ನಡೆಸುವ ಆಯೋಗ ಅಥವಾ ಇತರ ನೌಕರಿ ಭರ್ತಿ ಅಥವಾ ಪರೀಕ್ಷಾ ಪ್ರಾಧಿಕಾರವು ಯಾವುದೇ ಪರೀಕ್ಷೆ ತೆಗೆದುಕೊಳ್ಳುವುದರಿಂದ ಅಥವಾ ಯಾವುದೇ ಸಂದರ್ಶನಕ್ಕೆ ಹಾಜರಾಗುವುದರಿಂದ; ಮತ್ತು

(ಬಿ) ಸರ್ಕಾರವು ತನ್ನ ಅಡಿಯಲ್ಲಿನ ಉದ್ಯೋಗದಿಂದ

– ಖಾಯಂ ಆಗಿ ಅಥವಾ ಒಂದು ನಿರ್ದಿಷ್ಟ ಅವಧಿಯವರೆಗೆ ಅನರ್ಹಗೊಳಿಸಬಹುದು.

**21. ನಿರಸನ.–** (1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1957ನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಸದರಿ ನಿರಸನವು ಸದರಿ ನಿಯಮಗಳನ್ನು ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಬಾಧೆಉಂಟುಮಾಡತಕ್ಕದ್ದಲ್ಲ ಅಥವಾ ಸದರಿ ನಿಯಮಗಳಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

(2) (1)ನೇ ಉಪನಿಯಮದ ಮೂಲಕ ನಿರಸನಗೊಳಿಸಿದ ನಿಯಮಗಳಿಗೆ ಯಾವುದೇ ನಿಯಮದಲ್ಲಿ ಅಥವಾ ಆದೇಶದಲ್ಲಿ ಮಾಡಿದ ಉಲ್ಲೇಖವನ್ನು ಈ ನಿಯಮಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(3) (1)ನೇ ಉಪನಿಯಮದ ಮೂಲಕ ನಿರಸನಗೊಳಿಸಲಾದ ನಿಯಮಗಳ ಅಡಿಯಲ್ಲಿ ಪ್ರಾರಂಭಿಸಿದ ಮತ್ತು ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳನ್ನು ಈ ನಿಯಮಗಳ ಉಪಬಂಧಗಳಿಗನುಸಾರವಾಗಿ ಮುಂದುವರಿಸತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**(ಎನ್.ಪಿ.ಜೋಷಿ)**
ಸರ್ಕಾರದ ಉಪಕಾರ್ಯದರ್ಶಿ,
ಸಚಿವ ಸಂಪುಟ ವ್ಯವಹಾರಗಳ ಇಲಾಖೆ ಮತ್ತು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು)
ಸರ್ಕಾರದ ಅಧೀನ ಕಾರ್ಯದರ್ಶಿ,
(ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ)
(ಸೇವಾ ನಿಯಮಗಳು –1).

## ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977

**ಅಧಿಸೂಚನೆ**

**ಸಂಖ್ಯೆ ಡಿಪಿಎಆರ್ 57 ಎಸ್‌ಆರ್‌ಆರ್ 75, ದಿನಾಂಕ 25ನೇ ಜೂನ್ 1977**

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿರುತ್ತಾರೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಪ್ರೊಬೇಷನ್) ನಿಯಮಗಳು, 1977 ಎಂದು ಕರೆಯತಕ್ಕದ್ದು.

(2) ಅವು, ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆ.–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಪ್ರೊಬೇಷನ್ ಮೇಲೆ ನೇಮಿಸಲಾದ" ಎಂದರೆ ಪರೀಕ್ಷಾರ್ಥವಾಗಿ ನೇಮಿಸಲಾದ ಎಂದು ಅರ್ಥ.

(2) "ಪ್ರೊಬೇಷನರ್" ಎಂದರೆ ಪ್ರೊಬೇಷನ್ ಮೇಲಿರುವ ಸರ್ಕಾರಿ ನೌಕರ ಎಂದು ಅರ್ಥ.

**3. ಪ್ರೊಬೇಷನ್ ಅವಧಿ.–** ಪ್ರೊಬೇಷನ್ ಅವಧಿಯು ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧವಾಗಿ ವಿಶೇಷವಾಗಿ ರಚಿಸಿದ ನೌಕರಿ ಭರ್ತಿ ನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಇರತಕ್ಕದ್ದು ಮತ್ತು ಅದು, ಪ್ರೊಬೇಷನರ್‌ನು ಪ್ರೊಬೇಷನ್ ಅವಧಿಯಲ್ಲಿ ಇದ್ದಿರಬಹುದಾದಂಥ ಯಾವುದೇ ಅಸಾಧಾರಣ ರಜಾವಧಿಯನ್ನು ಹೊರತುಪಡಿಸಿ ಎರಡು ವರ್ಷಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**4. ಪ್ರೊಬೇಷನ್ ಅವಧಿಯನ್ನು ವಿಸ್ತರಿಸುವುದು ಅಥವಾ ಕಡಿತಗೊಳಿಸುವುದು.–** (1) ಪ್ರೊಬೇಷನ್ ಅವಧಿಯನ್ನು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ,–

(i) ರಾಜ್ಯಪಾಲರು ಅಥವಾ ಸರ್ಕಾರವು, ಅವರು ಅಥವಾ ಅದು ಯುಕ್ತವೆಂದು ಭಾವಿಸಬಹುದಾದಷ್ಟು ಅವಧಿಯವರೆಗೆ;

(ii) ಯಾವುದೇ ಇತರ ನೇಮಕ ಪ್ರಾಧಿಕಾರವು, ನಿರ್ದಿಷ್ಟಪಡಿಸಿದ ಪ್ರೊಬೇಷನ್ ಅವಧಿಯ ಅರ್ಧಕ್ಕಿಂತ ಹೆಚ್ಚಾಗದಷ್ಟು ಅವಧಿಯವರೆಗೆ

– ವಿಸ್ತರಿಸಬಹುದು:

ಪರಂತು, ಹಾಗೆ ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯೊಳಗೆ ಪ್ರೊಬೇಷನರನು, ಪ್ರೊಬೇಷನ್ ಅವಧಿಯಲ್ಲಿ ತೇರ್ಗಡೆಯಾಗಬೇಕಾಗಿರುವ ಯಾವುವೇ ಪರೀಕ್ಷೆಗಳು ಅಥವಾ ಉಪ ಪರೀಕ್ಷೆಗಳಿಗೆ ಹಾಜರಾಗಿದ್ದರೆ ಮತ್ತು ಅವುಗಳ ಫಲಿತಾಂಶವು ಅಂಥ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ತಿಳಿದುಬರದಿದ್ದರೆ, ಆಗ ಪ್ರೊಬೇಷನ್ ಅವಧಿಯನ್ನು ಅಂಥ ಪರೀಕ್ಷೆಗಳು ಅಥವಾ ಉಪ ಪರೀಕ್ಷೆಗಳ ಅಥವಾ ಇವುಗಳ ಪೈಕಿ ಯಾವ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಲು ವಿಫಲನಾಗಿರುವನೋ ಅವುಗಳ ಫಲಿತಾಂಶಗಳು ಪ್ರಕಟವಾಗುವವರೆಗೆ ವಿಸ್ತರಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಸರ್ಕಾರವು, ಆದೇಶದ ಮೂಲಕ ಪ್ರೊಬೇಷನರ್‌ನ ಪ್ರೊಬೇಷನ್ ಅವಧಿಯನ್ನು, ಆತನನ್ನು ನೇಮಕ ಮಾಡಿರುವ ಹುದ್ದೆಯ ಕರ್ತವ್ಯಗಳನ್ನು ಅಥವಾ ಯಾವ ಹುದ್ದೆಯ ಕರ್ತವ್ಯಗಳು ಆತನನ್ನು ನೇಮಕ ಮಾಡಿದ ಹುದ್ದೆಯ ಕರ್ತವ್ಯಗಳಿಗೆ ಸಮಾನವಾಗಿವೆ ಮತ್ತು ಅದೇ ಸ್ವರೂಪದವುಗಳಾಗಿವೆ ಎಂದು ಸರ್ಕಾರವು ಅಭಿಪ್ರಾಯಪಡುವುದೋ ಆ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಿದ ಅವಧಿಯನ್ನು ಮೀರದಂತೆ ಅಂಥ ಅವಧಿಯವರೆಗೆ ಕಡಿಮೆ ಮಾಡಬಹುದು.

**5. ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವುದರ ಬಗ್ಗೆ ಘೋಷಣೆ, ಇತ್ಯಾದಿ.–** (1) ನಿರ್ದಿಷ್ಟಪಡಿಸಿದ ಅಥವಾ ಸಂದರ್ಭಾನುಸಾರ ಕಡಿಮೆಮಾಡಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯ ಕೊನೆಯಲ್ಲಿ ನೇಮಕ ಪ್ರಾಧಿಕಾರವು, ಪ್ರೊಬೇಷನರ್‌ನನ್ನು ಯಾವ ಹುದ್ದೆಗೆ ನೇಮಕ ಮಾಡಲಾಗಿತ್ತೋ ಆ ಹುದ್ದೆಯನ್ನು ಹೊಂದಲು ಅವನ ಸೂಕ್ತತೆಯನ್ನು ಪರಿಗಣಿಸತಕ್ಕದ್ದು ಮತ್ತು,–

(ಎ) ಅದು, ಆತನನ್ನು ನೇಮಕ ಮಾಡಿರುವ ಹುದ್ದೆಯನ್ನು ಹೊಂದಲು ಪ್ರೊಬೇಷರನು ಸೂಕ್ತನಾಗಿದ್ದಾನೆ ಎಂದು ನಿರ್ಧರಿಸಿದರೆ ಮತ್ತು ಪ್ರೊಬೇಷನ್ ಅವಧಿಯಲ್ಲಿ ಉತ್ತೀರ್ಣನಾಗಬೇಕಿರುವ ವಿಶೇಷ ಪರೀಕ್ಷೆಗಳು ಅಥವಾ ಉಪ ಪರೀಕ್ಷೆಗಳು ಯಾವುವಾದರೂ ಇದ್ದರೆ ಅವುಗಳಲ್ಲಿ ಆತನು ಉತ್ತೀರ್ಣನಾಗಿದ್ದರೆ, ಅದು ಸಾಧ್ಯವಾದಷ್ಟು ಬೇಗನೆ ಪ್ರೊಬೇಷನರನು ತನ್ನ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾನೆಂದು ಘೋಷಿಸುವ ಆದೇಶವನ್ನು

ಹೊರಡಿಸತಕ್ಕದ್ದು ಮತ್ತು ಅಂಥ ಆದೇಶವು, ನಿರ್ದಿಷ್ಟಪಡಿಸಿದ, ಕಡಿಮೆ ಮಾಡಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಬಿ) ನೇಮಕ ಪ್ರಾಧಿಕಾರವು, ಆತನನ್ನು ನೇಮಕ ಮಾಡಿರುವ ಹುದ್ದೆಯನ್ನು ಹೊಂದಲು ಆತ ಸೂಕ್ತನಾಗಿರುವುದಿಲ್ಲವೆಂದು ನಿರ್ಧರಿಸಿದರೆ ಅಥವಾ ಪ್ರೊಬೇಷನ್ ಅವಧಿಯಲ್ಲಿ ಉತ್ತೀರ್ಣನಾಗಬೇಕಿರುವ ವಿಶೇಷ ಪರೀಕ್ಷೆಗಳು ಅಥವಾ ಉಪಪರೀಕ್ಷೆಗಳು ಯಾವುವಾದರೂ ಇದ್ದರೆ ಅವುಗಳಲ್ಲಿ ಆತನು ಉತ್ತೀರ್ಣನಾಗಿಲ್ಲದಿದ್ದರೆ ಅದು, 4ನೇ ನಿಯಮದ ಅಡಿಯಲ್ಲಿ ಪ್ರೊಬೇಷನ್ ಅವಧಿಯನ್ನು ವಿಸ್ತರಿಸದೇ ಇರುವಾಗ ಆತನನ್ನು ಆದೇಶದ ಮೂಲಕ ಸೇವೆಯಿಂದ ವಿಮುಕ್ತಗೊಳಿಸಬಹುದು.

(2) ಪ್ರೊಬೇಷನರನು ತೃಪ್ತಿಕರವಾಗಿ ಪ್ರೊಬೇಷನ್ ಅವಧಿಯನ್ನು ಪೂರ್ಣಗೊಳಿಸಿದ ಬಗ್ಗೆ ಒಂದು ಆದೇಶವನ್ನು ಹೊರಡಿಸದಿದ್ದಲ್ಲಿ, ಅದನ್ನು ಅವನು ಪೂರ್ಣಗೊಳಿಸಿರುವನೆಂದು ಪರಿಗಣಿಸತಕ್ಕದ್ದಲ್ಲ. (1)ನೇ ಉಪನಿಯಮದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದರಲ್ಲಿ ಉಂಟಾಗುವ ಯಾವುದೇ ವಿಳಂಬವು, ಪ್ರೊಬೇಷನರನು ತೃಪ್ತಿಕರವಾಗಿ ತನ್ನ ಪ್ರೊಬೇಷನ್ ಅವಧಿಯನ್ನು ಪೂರ್ಣಗೊಳಿಸಿರುವನೆಂದು ಭಾವಿಸುವುದಕ್ಕೆ ಅವನನ್ನು ಹಕ್ಕುಳ್ಳವನನ್ನಾಗಿಸುವುದಿಲ್ಲ.

**ಸೂಚನೆ:–** ಈ ನಿಯಮದಲ್ಲಿ ಮತ್ತು 6ನೇ ನಿಯಮದಲ್ಲಿ, ಪ್ರೊಬೇಷನರ್‌ನನ್ನು ಮತ್ತೊಂದು ಸೇವೆ ಅಥವಾ ಹುದ್ದೆಯಿಂದ ನೇಮಕ ಮಾಡಿದ ಸಂದರ್ಭದಲ್ಲಿ, 'ಸೇವೆಯಿಂದ ಬಿಡುಗಡೆ' ಎಂದರೆ ಆ ಸೇವೆ ಅಥವಾ ಹುದ್ದೆಗೆ ಹಿಂದಕ್ಕೆ ಕಳುಹಿಸುವುದು ಎಂದು ಅರ್ಥ.

**6. ಪ್ರೊಬೇಷನ್ ಅವಧಿಯಲ್ಲಿ ಪ್ರೊಬೇಷನರ್‌ನನ್ನು ಸೇವೆಯಿಂದ ಬಿಡುಗಡೆ ಮಾಡುವುದು.–** (1) 5ನೇ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ನೇಮಕ ಪ್ರಾಧಿಕಾರವು, ನಿಯಮಗಳ ಮೂಲಕ ಅಥವಾ ನೌಕರಿ ಭರ್ತಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಂದ ಅಥವಾ ಹುದ್ದೆಯಲ್ಲಿ ಆತನ ಸೇವೆಗೆ ಆತನು ಸೂಕ್ತನಲ್ಲವೆಂಬ ಕಾರಣದಿಂದ ಉದ್ಭವಿಸುವ ಆಧಾರಗಳ ಮೇಲೆ, ಪ್ರೊಬೇಷನರನನ್ನು ಪ್ರೊಬೇಷನ್ ಅವಧಿಯ ಯಾವುದೇ ಕಾಲದಲ್ಲಿ ಸೇವೆಯಿಂದ ಬಿಡುಗಡೆ ಮಾಡಬಹುದು, ಆದರೆ ಸರ್ಕಾರವು ಹಾಗೆ ಸೇವೆಯಿಂದ ಬಿಡುಗಡೆ ಮಾಡಿರುವ ಆದೇಶವನ್ನು ಹೊರಡಿಸಿದ ಹೊರತು ನಿಕಟ ಉನ್ನತ ಪ್ರಾಧಿಕಾರಕ್ಕೆ ಅದನ್ನು ಸಲ್ಲಿಸುವವರೆಗೆ ಮತ್ತು ಆ ಪ್ರಾಧಿಕಾರವು ಅದನ್ನು ಸ್ಥಿರೀಕರಿಸುವವರೆಗೆ ಅದನ್ನು ಜಾರಿಗೊಳಿಸತಕ್ಕದ್ದಲ್ಲ.

(2) ಈ ನಿಯಮದ ಅಡಿಯಲ್ಲಿ ಪ್ರೊಬೇಷನರ್‌ನನ್ನು ಸೇವೆಯಿಂದ ಬಿಡುಗಡೆ ಮಾಡುವ ಆದೇಶವು ಸೇವೆಯಿಂದ ಬಿಡುಗಡೆಯ ಆಧಾರಗಳನ್ನು ತಿಳಿಸತಕ್ಕದ್ದು. ಆದರೆ ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಅಡಿಯಲ್ಲಿ ಔಪಚಾರಿಕ ವ್ಯವಹರಣೆಗಳು ಅವಶ್ಯವಾಗಿರತಕ್ಕದ್ದಲ್ಲ.

**7. ದುರ್ನಡತೆಗಾಗಿ ತೆಗೆದುಹಾಕುವುದು.–** ಯಾವುದೇ ದುರ್ನಡತೆಗಾಗಿ ಪ್ರೊಬೇಷನ್ ಅವಧಿಯಲ್ಲಿ ಅಥವಾ ಪ್ರೊಬೇಷನ್ ಅವಧಿಯ ಕೊನೆಯಲ್ಲಿ ಪ್ರೊಬೇಷನರ್‌ನನ್ನು ಸೇವೆಯಿಂದ ತೆಗೆದುಹಾಕುವ ಆದೇಶವನ್ನು ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಅನುಸಾರವಾಗಿ ಹೊರತು ಹೊರಡಿಸತಕ್ಕದ್ದಲ್ಲ.

**8. ಅಪೀಲು.–** 5ನೇ ನಿಯಮದ ಅಥವಾ 6ನೇ ನಿಯಮದ ಅಡಿಯಲ್ಲಿ ಪ್ರೊಬೇಷನರನನ್ನು ಸೇವೆಯಿಂದ ಬಿಡುಗಡೆ ಮಾಡುವ ಆದೇಶದ ವಿರುದ್ಧ ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

**9. ಸ್ಥಿರೀಕರಣ.–** ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1977ರ 19ನೇ ನಿಯಮದ (4)ನೇ ಉಪನಿಯಮಕ್ಕೆ ಒಳಪಟ್ಟು, ಯಾರು ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾನೆಂದು ಘೋಷಿಸಲಾಗಿದೆಯೋ ಆ ಪ್ರೊಬೇಷನರ್‌ನನ್ನು ಇರಬಹುದಾದ ಅಥವಾ ಉದ್ಭವಿಸಬಹುದಾದ ಯಾವುದೇ ಮೂಲ ಖಾಲಿ ಹುದ್ದೆಯಲ್ಲಿ ಅವಕಾಶ ದೊರೆತ ಕೂಡಲೇ ಸ್ಥಿರೀಕರಿಸತಕ್ಕದ್ದು:

ಪರಂತು, ಅಂಥ ಸ್ಥಿರೀಕರಣಕ್ಕೆ ಒಬ್ಬರಿಗಿಂತ ಹೆಚ್ಚು ಅನುಮೋದಿತ ಪ್ರೊಬೇಷನರ್‌ರು ಲಭ್ಯವಿರುವಾಗ ಖಾಲಿ ಹುದ್ದೆಯ ದಿನಾಂಕದಂದು ಅತ್ಯಂತ ಹಿರಿಯ ಅನುಮೋದಿತ ಪ್ರೊಬೇಶನರನನ್ನು ಸ್ಥಿರೀಕರಿಸತಕ್ಕದ್ದು.

**10. ವೇತನ ಬಡ್ತಿ ಮತ್ತು ವೇತನ.–** (1) ಪ್ರಾರಂಭಿಕ ಅಥವಾ ಉನ್ನತ ಹಂತದ ಕಾಲಿಕ ವೇತನ ಶ್ರೇಣಿಗೆ ನೇಮಕಗೊಂಡ ಪ್ರೊಬೇಷನರ್‌ನು, ಗೊತ್ತುಪಡಿಸಿದ [1][xxx][1] ಪ್ರೊಬೇಷನ್ ಅವಧಿಯಲ್ಲಿ ಬಾಕಿ ಉಳಿದಿರುವ ವೇತನ ಬಡ್ತಿಯನ್ನು ಪಡೆಯಬಹುದು. ಆದಾಗ್ಯೂ, ಅವನು ತನ್ನ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವುದಾಗಿ ಘೋಷಿಸಿದ ಹೊರತು ಮತ್ತು ಅಲ್ಲಿಯವರೆಗೆ ಅಂಥ ಅವಧಿಯು ಸಮಾಪ್ತಿಯಾದ ತರುವಾಯ ಯಾವುವೇ ವೇತನ ಬಡ್ತಿಗಳನ್ನು ಅವನು ಪಡೆಯತಕ್ಕದ್ದಲ್ಲ.

(2) ಪ್ರೊಬೇಷನರ್‌ನು ತನ್ನ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾನೆಂದು ಘೋಷಿಸಿರುವಾಗ ಅಂಥ ಆದೇಶವು ಜಾರಿಗೆ ಬಂದ ದಿನಾಂಕದಿಂದ, ಪ್ರೊಬೇಷನ್ ಮೇಲೆ ಅವನನ್ನು ನೇಮಕ ಮಾಡಿದ

ದಿನಾಂಕದಿಂದ ಅವನ ಇಡೀ ಸೇವೆಗಾಗಿ ವೇತನ ಬಡ್ತಿಗಳನ್ನು ಪಡೆಯಲು ಅವನಿಗೆ ಅನುಮತಿಸಿದ್ದರೆ ಅವನು ಪಡೆಯಬಹುದಾಗಿದ್ದಂಥ ವೇತನವನ್ನು ಅವನು ಪಡೆಯತಕ್ಕದ್ದು.

**11. ನೇಮಕಾತಿಯ ಸಿಂಧುತ್ವವನ್ನು ಪ್ರಶ್ನಿಸಿರುವಾಗ ಪ್ರೊಬೇಷನ್ ಅವಧಿ.–** ಪೂರ್ವೋಕ್ತ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯನ್ನು ಪ್ರೊಬೇಷನರ್‌ನನ್ನಾಗಿ ನೇಮಕ ಮಾಡಿರುವುದರ ಸಿಂಧುತ್ವವನ್ನು ಯಾವುದೇ ನ್ಯಾಯಾಲಯದ ಮುಂದಿರುವ ಯಾವುದೇ ಕಾನೂನು ವ್ಯವಹರಣೆಯಲ್ಲಿ ಪ್ರಶ್ನಿಸಿರುವಾಗ [2][ಮತ್ತು ಅಂಥ ನ್ಯಾಯಾಲಯ ನೀಡಿರುವ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಘೋಷಣೆಯನ್ನು ಪ್ರತಿಷೇಧಿಸುವ][2] ಮಧ್ಯಕಾಲೀನ ಆದೇಶಗಳನ್ನು ಅಂಥ ನ್ಯಾಯಾಲಯವು ಮಾಡಿರುವಾಗ ಅಂಥ ವ್ಯಕ್ತಿಯ ಪ್ರೊಬೇಷನ್ ಅವಧಿಯು ವ್ಯವಹರಣೆಗಳು ಅಂತಿಮವಾಗಿ ವಿಲೆಯಾಗುವವರೆಗೆ ಮುಂದುವರೆಯತಕ್ಕದ್ದು ಮತ್ತು ಅಂಥ ವಿಲೆ ಇತ್ಯರ್ಥದಲ್ಲಿರುವಾಗ, ನೇಮಕ ಪ್ರಾಧಿಕಾರವು, ಪ್ರೊಬೇಷನರನು ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವನೆಂದು ಅದಕ್ಕೆ ಮನದಟ್ಟಾದರೆ, ಅಂಥ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಪ್ರೊಬೇಷನರ್‌ನು ಹೊಂದಿರುವ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನ ಬಡ್ತಿಗಳನ್ನು ಪಡೆಯುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ವೇತನ ಬಡ್ತಿಗಳನ್ನು ಸಾಮಾನ್ಯವಾಗಿ, ಸರ್ಕಾರಿ ನೌಕರರಿಗೆ ಅನ್ವಯಿಸುವ ವೇತನ ಬಡ್ತಿಗಳನ್ನು ಪಡೆಯುವುದನ್ನು ನಿಯಂತ್ರಿಸುವ ಇತರ ಉಪಬಂಧಗಳಿಗೆ ಒಳಪಟ್ಟು, ಅಂಥ ಪ್ರೊಬೇಷನರನು ತದನುಸಾರವಾಗಿ ಪಡೆಯತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 65 ಎಸ್‌ಆರ್‌ಆರ್ 78, 18–4–1980 ರಾಜ್ಯಪತ್ರ 1–5–1980ರ ಮೂಲಕ ಬಿಟ್ಟುಬಿಡಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 16 ಎಸ್‌ಆರ್‌ಆರ್ 85 ದಿನಾಂಕ 31–12–1985 ರಾಜ್ಯಪತ್ರ 16–1–1986ರ ಮೂಲಕ ಸೇರಿಸಲಾಗಿದೆ.

ಪರಂತು, ಅಂಥ ವ್ಯವಹರಣೆಗಳಲ್ಲಿ ಅಂಥ ಯಾವುದೇ ಮಧ್ಯಕಾಲೀನ ಆದೇಶವನ್ನು ಹೊರಡಿಸಿಲ್ಲದಿರುವಲ್ಲಿ, ನೇಮಕ ಪ್ರಾಧಿಕಾರವು, ಪ್ರೊಬೇಷನರ್‌ನು ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವನೆಂದು ಅದಕ್ಕೆ ಮನದಟ್ಟಾದರೆ, ಅಂಥ ವ್ಯವಹರಣೆಗಳಲ್ಲಿನ ಅಂತಿಮ ಆದೇಶಕ್ಕೆ ಒಳಪಟ್ಟು, ಪ್ರೊಬೇಷನರ್‌ನು ತನ್ನ ಪ್ರೊಬೇಷನ್ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವನೆಂದು ಆದೇಶದ ಮೂಲಕ ಘೋಷಿಸಬಹುದು.

**12. ನಿರಸನ.–** (1) ಕರ್ನಾಟಕ ಸರ್ಕಾರೀ ನೌಕರರ ಪ್ರೊಬೇಷನ್ ನಿಯಮಗಳು, 1957ನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಸದರಿ ನಿರಸನವು ಸದರಿ ನಿಯಮಗಳ ಹಿಂದಿನ ಕಾರ್ಯಾಚರಣೆಗೆ ಅಥವಾ ಅದರ ಮೇರೆಗೆ ಯಥೋಚಿತವಾಗಿ ಮಾಡಿದ ಅಥವಾ ತೊಂದರೆಗೊಳಗಾದ ಯಾವುದಕ್ಕೇ ಆಗಲಿ ಬಾಧೆ ಉಂಟುಮಾಡತಕ್ಕದ್ದಲ್ಲ ಅಥವಾ ಸದರಿ ನಿಯಮಗಳ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

(2) (1)ನೇ ಉಪನಿಯಮದ ಮೂಲಕ ನಿರಸನಗೊಳಿಸಿದ ನಿಯಮಗಳಿಗೆ ಯಾವುದೇ ನಿಯಮದಲ್ಲಿ ಅಥವಾ ಆದೇಶದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಈ ನಿಯಮಗಳಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

(3) (1)ನೇ ಉಪನಿಯಮದ ಮೂಲಕ ನಿರಸನಗೊಳಿಸಲಾದ ನಿಯಮಗಳ ಅಡಿಯಲ್ಲಿ ಪ್ರಾರಂಭಿಸಿದ ಮತ್ತು ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳನ್ನು ಈ ನಿಯಮಗಳ ಉಪಬಂಧಗಳಿಗನುಸಾರವಾಗಿ ಮುಂದುವರಿಸತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**(ಎನ್.ಪಿ. ಜೋಷಿ)**

ಸರ್ಕಾರದ ಉಪ ಕಾರ್ಯದರ್ಶಿ,
ಸಚಿವ ಸಂಪುಟ ವ್ಯವಹಾರಗಳ ಇಲಾಖೆ ಮತ್ತು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು).

The above translation of the Karnataka Civil Services (General Recruitment) Rules, 1977 and The Karnataka Civil Services (Probation) Rules, 1977 shall be authoritative text in the Kannada Language under section 5A of the Karnataka Official Language Act, 1963.

Governor of Karnataka

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 277

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.